ಸತ್ಯ ಮತ್ತು ಧೈರ್ಯದ ಧ್ವನಿ

# ತುಂಗ ಬಿಂಬ

TUNGA BIMBA | KANNADA DAILY MORNING | ಕನ್ನಡ ದಿನ ಪತ್ರಿಕೆ | RNI No: KARKAN/2023/86923

ಸಂಪುಟ: 04 Vol: | ಸಂಚಿಕೆ: 103 Issue: | ರಾಯಚೂರು Raichur | 05-10-2026 | ಸೋಮವಾರ Monday | ಪುಟ : 04 Page: | ಬೆಲೆ: Price: ₹ 2.00 | Postal Reg No.: RCR/L/RNP/95/2025-27 | tungabimba@gmail.com | ಸಂಪಾದಕರು : ಗುರುರಾಜ ಕೆ | Editor: Gururaja K 98863 85685

ನಿವೃತ್ತಿಗೂ ಮುನ್ನ ಈ ದಾಖಲೆ ಬೇಕು: 92 ರನ್ ಗೆ ಔಟಾದ ರೋಹಿತ್ ಶರ್ಮಾಗೆ ಗವಾಸ್ಕರ್ ಟಾರ್ಗೆಟ್!



## ವಿಮಾನ ಪತನಗೊಳಿಸುವುದೇ ಉದ್ದೇಶವಾಗಿತ್ತು: ಫ್ಲೈದುಬೈ ಸಹ ಪೈಲಟ್‌ನ ಹೇಳಿಕೆ

ರಿಯಾದ್: ಫ್ಲೈದುಬೈ ವಿಮಾನದ ಕಾಕ್‌ಪಿಟ್‌ನಲ್ಲಿ ಕ್ಯಾಪ್ಟನ್ ಸ್ಮಿತ್ ಮಚ್ಚಾರ್ ಮೇಲೆ ಹಲ್ಲೆ ನಡೆಸಿ ವಿಮಾನವನ್ನು ಪತನಗೊಳಿಸಲು ಯತ್ನಿಸಿದ ಆರೋಪ ಎದುರಿಸುತ್ತಿರುವ ಸಹ ಪೈಲಟ್ ಹಮಾಮ್ ಅಲ್-ಹಮ್ಮಾಮಿ, ವಿಮಾನವನ್ನು ಪತನಗೊಳಿಸುವ ಉದ್ದೇಶ ಹೊಂದಿದ್ದಾಗಿ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿದ್ದಾನೆ ಎಂದು ದಿ ವಾಲ್ ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ.

ಸೆಪ್ಟೆಂಬರ್ 30ರಂದು ದುಬೈನಿಂದ ಟೆಲ್ ಅವೀವ್‌ಗೆ ತೆರಳುತ್ತಿದ್ದ ಫ್ಲೈದುಬೈ ವಿಮಾನ ಎಫ್‌ಝೆಡ್1073ರಲ್ಲಿ ಈ ಘಟನೆ ನಡೆದಿತ್ತು. ವಿಮಾನದಲ್ಲಿ 170ಕ್ಕೂ ಹೆಚ್ಚು ಪ್ರಯಾಣಿಕರಿದ್ದರು. ಹಮಾಮ್ ಅಲ್-ಹಮ್ಮಾಮಿ ಕಾಕ್‌ಪಿಟ್‌ನಲ್ಲಿದ್ದ ತುರ್ತು ಸಂದರ್ಭದ ಕ್ರ್ಯಾಶ್ ಆ್ಯಕ್ಸ್ ಬಳಸಿ ಕ್ಯಾಪ್ಟನ್



ಸ್ಮಿತ್ ಮಚ್ಚಾರ್ ಮೇಲೆ ಹಲ್ಲೆ ನಡೆಸಿದ್ದಾನೆ ಎಂಬ ಆರೋಪವಿದೆ. ಗಾಯಗೊಂಡಿದ್ದರೂ ಕ್ಯಾಪ್ಟನ್ ಪರಿಸ್ಥಿತಿಯನ್ನು ನಿಭಾಯಿಸಲು ಪ್ರಯತ್ನಿಸಿದ್ದು, ಬಳಿಕ ವಿಮಾನವನ್ನು ಸೌದಿ ಅರೇಬಿಯಾದ ತಬೂಕ್ ವಿಮಾನ ನಿಲ್ದಾಣಕ್ಕೆ ಸುರಕ್ಷಿತವಾಗಿ ತಿರುಗಿಸಲಾಗಿತ್ತು.

ಹಮ್ಮಾಮಿ ವಿಚಾರಣೆಯ ವಿವರಗಳ ಬಗ್ಗೆ ಮಾಹಿತಿ ಹೊಂದಿರುವ ಸೌದಿ ಅಧಿಕಾರಿಯೊಬ್ಬರನ್ನು ಉಲ್ಲೇಖಿಸಿರುವ ವರದಿಯ ಪ್ರಕಾರ, ವಿಮಾನವನ್ನು ಪತನಗೊಳಿಸುವ ಉದ್ದೇಶವಿತ್ತು ಹಾಗೂ ಸಾವಿನ ಬಗ್ಗೆ ತನಗೆ ಭಯವಿರಲಿಲ್ಲ ಎಂದು ಆರೋಪಿ ತನಿಖಾಧಿಕಾರಿಗಳಿಗೆ ತಿಳಿಸಿದ್ದಾನೆ ಎನ್ನಲಾಗಿದೆ.

ಈ ಹೇಳಿಕೆ ಹೊರಬಿದ್ದ ಬೆನ್ನಲ್ಲೇ ಹಮ್ಮಾಮಿಯ ಹಿನ್ನೆಲೆ ಮತ್ತು ಫ್ಲೈದುಬೈ ಸಂಸ್ಥೆಯ ನೇಮಕಾತಿ ಪ್ರಕ್ರಿಯೆಯ ಕುರಿತು ಹಲವು ಪ್ರಶ್ನೆಗಳು ಉದ್ಭವಿಸಿವೆ. ಓಮನ್ ಪ್ರಜೆಯಾಗಿರುವ ಹಮ್ಮಾಮಿ ಈ ಹಿಂದೆ ಓಮನ್ ಏರ್‌ನಲ್ಲಿ ಕಾರ್ಯನಿರ್ವಹಿಸಿದ್ದ. ತೀವ್ರಗಾಮಿ ಸಿದ್ಧಾಂತಗಳ ಕುರಿತು ಅನುಮಾನ ವ್ಯಕ್ತವಾದ ಹಿನ್ನೆಲೆಯಲ್ಲಿ ಆತನನ್ನು ವಿಮಾನ ಹಾರಾಟದ ಕರ್ತವ್ಯದಿಂದ ದೂರವಿರಿಸಲಾಗಿತ್ತು 2ನೇ ಪುಟಕ್ಕೆ

## ನೋಟಿಸ್, ವಿಚಾರಣೆ ಇಲ್ಲದೆ ಮತದಾರರ ಪಟ್ಟಿಯಿಂದ ಹೆಸರು ತೆಗೆದುಹಾಕುವಂತಿಲ್ಲ: ನ್ಯಾ. ಉಜ್ಜಲ್ ಭುಯಾನ್

ಹೈದರಾಬಾದ್: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಕುರಿತು ದೇಶಾದ್ಯಂತ ಚರ್ಚೆ ನಡೆಯುತ್ತಿರುವ ಬೆನ್ನಲ್ಲೇ, ಮತದಾರರ ಪಟ್ಟಿಯಲ್ಲಿ ಒಮ್ಮೆ ಹೆಸರು ಸೇರ್ಪಡೆಯಾದ ಬಳಿಕ ಸಂಬಂಧಪಟ್ಟ ವ್ಯಕ್ತಿಗೆ ನೋಟಿಸ್ ನೀಡದೆ ಹಾಗೂ ತನ್ನ ವಾದ ಮಂಡಿಸಲು ಅವಕಾಶ ಕಲ್ಪಿಸದೆ ಹೆಸರು ತೆಗೆದುಹಾಕುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಉಜ್ಜಲ್ ಭುಯಾನ್ ಹೇಳಿದ್ದಾರೆ.

NALSAR ಕಾನೂನು ವಿಶ್ವವಿದ್ಯಾಲಯದಲ್ಲಿ ಭಾನುವಾರ ನಡೆದ 19ನೇ NALSAR ನ್ಯಾಯಮೂರ್ತಿ ಬಿ.ಆರ್. ಸಾಹ್ನಿ ಸ್ಮಾರಕ ಮೂಟ್ ಕೋರ್ಟ್ ಸ್ಪರ್ಧೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಹೆಚ್ಚಿನ ಸಂಖ್ಯೆಯ ಭಾರತೀಯ ನಾಗರಿಕರು ಮತದಾನದ ಹಕ್ಕಿನಿಂದ ವಂಚಿತರಾಗುವಂತಹ ಯಾವುದೇ ಪ್ರಕ್ರಿಯೆಯು ನಿರಂಕುಶವಾಗಿದ್ದು,



ಸಂವಿಧಾನದ 326 ಹಾಗೂ 14ನೇ ವಿಧಿಗಳ ಆಶಯಕ್ಕೆ ವಿರುದ್ಧವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಲಕ್ಷಾಂತರ ಭಾರತೀಯ ನಾಗರಿಕರನ್ನು ಮತದಾನದ ಹಕ್ಕಿನಿಂದ ವಂಚಿಸಿ, ತಮ್ಮದೇ ದೇಶದಲ್ಲಿ ದ್ವಿತೀಯ ದರ್ಜೆಯ ನಾಗರಿಕರು ಎಂಬ ಸ್ಥಿತಿಗೆ ತಳ್ಳುವಂತಹ ಪ್ರಕ್ರಿಯೆಯನ್ನು ಯಾವುದೇ ಸಮರ್ಥನೆಯಿಂದಲೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಅದು ಸಂವಿಧಾನದ ಮೂಲ ಆಶಯಕ್ಕೆ ಧಕ್ಕೆ ತರುವಂತಾಗುತ್ತದೆ ಎಂದು ಹೇಳಿದರು.

ಭಾರತೀಯ ಸಂವಿಧಾನವು ನಾಗರಿಕರನ್ನು ಮತದಾನದ ಹಕ್ಕುಳ್ಳವರು ಮತ್ತು ಮತದಾನದ ಹಕ್ಕಿಲ್ಲದವರು ಎಂಬ ಎರಡು ಪ್ರತ್ಯೇಕ ವರ್ಗಗಳಾಗಿ ವಿಂಗಡಿಸುವುದಿಲ್ಲ. ನಾಗರಿಕರನ್ನು ಸಾಮೂಹಿಕವಾಗಿ ಮತದಾನದ ಹಕ್ಕಿನಿಂದ ವಂಚಿಸುವ ಪ್ರಕ್ರಿಯೆ ಸಂವಿಧಾನದ ಸಮಾನತೆಯ ತತ್ವ ಹಾಗೂ ವಯಸ್ಕ ಮತಾಧಿಕಾರದ ಆಶಯಕ್ಕೆ ವಿರುದ್ಧವಾಗುತ್ತದೆ ಎಂದು ಅವರು ಪ್ರತಿಪಾದಿಸಿದರು.

ಮತದಾನದ ಹಕ್ಕು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅತ್ಯಂತ ಮಹತ್ವದ್ದಾಗಿದೆ. ಭಾರತೀಯ ಪ್ರಜೆಯೊಬ್ಬರ ಮತದಾನದ ಹಕ್ಕನ್ನು ಅಥವಾ ಮತದಾರರ ಪಟ್ಟಿಯಲ್ಲಿ ಹೆಸರು ಹೊಂದುವ ಹಕ್ಕನ್ನು ಕಸಿದುಕೊಳ್ಳುವುದು ದೇಹದಿಂದ ಆತ್ಮವನ್ನು ಬೇರ್ಪಡಿಸಿದಂತೆ ಎಂದು ನ್ಯಾ. ಭುಯಾನ್ ಬಣ್ಣಿಸಿದರು.

"ಸಂವಿಧಾನಕ್ಕಿಂತ 2ನೇ ಪುಟಕ್ಕೆ

# ಕೇಂದ್ರ ತಂಡದಿಂದ ರಾಯಚೂರು ಜಿಲ್ಲೆಯಲ್ಲಿ ಬರ ಸಮೀಕ್ಷೆ

ರಾಯಚೂರು. ಅ.. 4.(ಕರ್ನಾಟಕ ವಾರ್ತೆ):- ಪಾಟ್ನಾದ ಭತ್ತ ಅಭಿವೃದ್ಧಿ ಇಲಾಖೆಯ ನಿರ್ದೇಶಕರಾದ ಡಾ. ಮಾನಸಿಂಗ್ ಅವರ ನೇತೃತ್ವದ ಅಧಿಕಾರಿಗಳ ತಂಡದಿದ ಅಕ್ಟೋಬ‌ರ್ 4 ರ ರವಿವಾರ ದಂದು ರಾಯಚೂರು ಜಿಲ್ಲೆಯಲ್ಲಿ ಬರ ಸಮೀಕ್ಷೆ ನಡೆಸಲಾಯಿತು. ಭಾರತ ಸರ್ಕಾರದ ವೆಚ್ಚ ಇಲಾಖೆಯ ಅಧೀನ ಕಾರ್ಯದರ್ಶಿ ಪಾರ್ಥ ಪಾಲ್ ಹಾಗೂ ಭಾರತ ಸರಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ರಾಕೇಶ್ ಕುಮಾರ್ ಅವರು ಜಿಲ್ಲೆಯಲ್ಲಿ ಆಗಿರುವ ಮಳೆಯ ಪ್ರಮಾಣ. ಬರದಿಂದ ಆಗಿರುವ ಬೆಳೆ ಹಾನಿ. ಕ್ರಾಫ್ ಕಟಿಂಗ್. ಕುರಿತು ಕೃಷಿ ಇಲಾಖೆ. ತೋಟಗಾರಿಕೆ ಹಾಗೂ ಪಶು ಇಲಾಖೆ ಸೇರಿದಂತೆ ಇತರೆ ಸಂಬಧಿಸಿದ ವಿವಿಧ ಇಲಾಖೆಯ ಅಧಿಕಾರಿಗಳಿಂದ ದೇವದುರ್ಗ ತಾಲ್ಲೂಕು ಪಂಚಾಯತ ಕಛೇರಿ ಸಭಾಂಗಣದಲ್ಲಿ ಸಭೆ ನಡೆಸಿ ಜಿಲ್ಲೆಯ ಬರದಿಂದಾದ ಹಾನಿಯ ಕುರಿತು ಸಮಗ್ರ ಮಾಹಿತಿ ಪಡೆದುಕೊಂಡರು.

ಸಭೆಯ ನಂತರ ದೇವದುರ್ಗ ತಾಲ್ಲೂಕಿನ ಮಸರಕಲ್ ಗ್ರಾಮದ ಹೊಲದಲ್ಲಿ ಅನಾವೃಷ್ಟಿಯಿಂದ ಹಾನಿಯಾದ ಹತ್ತಿ ಹಾಗೂ ಮೆಣಸಿನಕಾಯಿ ಬೆಳೆ ವೀಕ್ಷಣೆ ಮಾಡಿ ರೈತರಿಂದ ಮಾಹಿತಿ ಪಡೆದುಕೊಂಡರು. ನಂತರ ಎನ್ ಗಣೇಕಲ್ ಗ್ರಾಮದ ಹೊಲದಲ್ಲಿ ಹತ್ತಿ ಬೆಳೆಹಾನಿ ವೀಕ್ಷಣೆ



ಮಾಡಿ ರೈತರಿಂದ ಮಾಹಿತಿ ಪಡೆದುಕೊಂಡಾಗ ಜಮೀನಿನ ರೈತರು ನಮಗೆ ಈ ವರ್ಷ ಮಳೆ ಬರದೆ ಇರುವುದರಿಂದ ಹೊಲಕ್ಕೆ ಹಾಕಿದ ಬೀಜ ಗೊಬ್ಬರದ ದುಡ್ಡು ಬರದಂತೆ ಆಗಿದೆ. ಪ್ರತಿ ವರ್ಷ ಹತ್ತಿ ಎಕರೆಗೆ 12 ರಿಂದ 15 ಕ್ವಿಂಟಲ್ ಬರುತ್ತಿತ್ತು ಈ ವರ್ಷ ಎಕರೆಗೆ 2 ರಿಂದ ಮೂರು ಕುಂಟಲ ಬಂದಿದೆ ಇದರಿಂದ ನಾವು ಬಹಳ ನಷ್ಟದಲ್ಲಿದ್ದೇವೆ. ಬರಗಾಲದಿಂದ ನಮ್ಮ ಊರಿನ ಜನರು ಬೇರೆ ಕಡೆಗೆ ಗೂಳೆ ಹೋಗುತ್ತಿದ್ದಾರೆ. ಎಕರೆಗೆ 50 ಸಾವಿರ ನಮಗೆ ಬರ ಪರಿಹಾರ ನೀಡಬೇಕೆಂದು ಕೇಂದ್ರ ತಂಡಕ್ಕೆ ಮನವಿ ಮಾಡಿದರು.

ಗಣೇಕಲ್ ಜಲಾಶಯಕ್ಕೆ ಬೇಟಿ ನೀಡಿ ತಂಡ ವಿಬಿ ಜಿ ರಾಮ್ ಜಿ ಕಾಮಗಾರಿಯ ವೀಕ್ಷಣೆ ಮಾಡಿ ಅಲ್ಲಿ ಕೆಲಸ





ಮಾಡುತ್ತಿರುವ ಜನರಿಂದ ಕೆಲಸ ಹೇಗೆ ನಡೆಯುತ್ತಿದೆ ಇದರಿಂದ ತಮಗೆ ಆಗುತ್ತಿರುವ ಅನುಕೂಲ ಮತ್ತು ಇತರೆ ಸಮಸ್ಯೆಗಳಿದ್ದರೆ ತಿಳಿಸಿ ಎಂದು ಕೇಳಿದ ಕೇಂದ್ರ ತಂಡದ ಸದಸ್ಯರು ನಮಗೆ ಸಂಬಳ ಇನ್ನೂ ಹೆಚ್ಚಿಸಬೇಕು ದಿನಕ್ಕೆ 375 ರೂ ಕೊಡುತ್ತಾರೆ ಅದೇ ಹೊರಗಡೆ ಕೆಲಸಕ್ಕೆ ಹೋದರೆ 700 ರಿಂದ 800 ರೂ ಕೂಲಿ ಕೊಡುತ್ತಾರೆ ಹಾಗಾಗಿ ನಮಗೆ ಕೂಲಿ ಹೆಚ್ಚಿಸಬೇಕೆಂದು ಕೆಲಸಗಾರರು ಹೇಳಿದರು.

ರಾಯಚೂರು ಜಿಲ್ಲೆಯ ಮಸರಕಲ್. ಎನ್. ಗಣೇಕಲ್. ಮಂದಕಲ್. ಯರಡೋಣ ಸೇರಿದಂತೆ ಇತರೆ ಕಡೆ ಬರ ಸಮೀಕ್ಷೆ ವೀಕ್ಷಣೆ ಮಾಡಿ ರೈತರ ಸಮಸ್ಯೆಗಳನ್ನು ಆಲಿಸಲು ನಾವು ಇಲ್ಲಿಗೆ ಬಂದಿದ್ದೆವೆ ತಮ್ಮ ಜಮೀನುಗಳಲ್ಲಿ ಹಾನಿಯಾದ ಮಾಹಿತಿಯನ್ನು ಪರಿಶೀಲನೆ ಮಾಡಲಾಗಿದೆ ಇದರ ಸಮಗ್ರ ವರದಿಯನ್ನು ಸರಕಾರಕ್ಕೆ ಸಲ್ಲಿಸಲಾಗುವುದು ಎಂದು ಕೇಂದ್ರ ತಂಡ ರೈತರಿಗೆ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ಸರಕಾರದ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಕಾರ್ಯದರ್ಶಿ ಗಿರಿಶ್ ಆರ್. ಜಿಲ್ಲಾಧಿಕಾರಿ ಪೂವಿತಾ ಎಸ್. ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕಾಂದೂ. ಸಹಾಯಕ ಆಯುಕ್ತರಾದ ಡಾ. ಹಂಪಣ್ಣ ಸಜ್ಜನ. ರಾಯಚೂರು ಕೃಷಿ ಇಲಾಖೆಯ ಕೃಷಿ ವಿಜ್ಞಾನಗಳು, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಪ್ರಕಾಶ ಚವ್ಹಾಣ. ದೇವದುರ್ಗ ತಹಶಿಲ್ದಾರ ನಾಗಮ್ಮ ಕಟ್ಟಿಮನಿ. ಸೇರಿದಂತೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ನಮೋಶಿ ಗೆಲುವಿಗೆ ಶಿಕ್ಷಕರ ಬೆಂಬಲ ಕೋರಿದ ತಿಪ್ಪರಾಜು ಹವಾಲ್ದಾರ್

ರಾಯಚೂರು, ಅ.4: ಈಶಾನ್ಯ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯ ಹಿನ್ನೆಲೆಯಲ್ಲಿ ಬಿಜೆಪಿ ಅಭ್ಯರ್ಥಿ ಶಶೀಲ್ ನಮೋಶಿ ಅವರ ಗೆಲುವಿಗಾಗಿ ಮಾಜಿ ಶಾಸಕ ತಿಪ್ಪರಾಜು ಹವಾಲ್ದಾರ್ ರಾಯಚೂರು ಗ್ರಾಮೀಣ ಕ್ಷೇತ್ರದ ವಿವಿಧೆಡೆ ಪ್ರಚಾರ ಕೈಗೊಂಡು ಶಿಕ್ಷಕರ ಬೆಂಬಲ ಕೋರಿದರು.

ತಾಲೂಕಿನ ಯಾಪಲದಿನ್ನಿ ಗ್ರಾಮದ ವಿವಿಧ ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿದ ಅವರು, ಶಿಕ್ಷಕರು ಹಾಗೂ ಉಪನ್ಯಾಸಕರೊಂದಿಗೆ ಮಾತುಕತೆ ನಡೆಸಿದರು. ಶಿಕ್ಷಣ ಕ್ಷೇತ್ರ ಎದುರಿಸುತ್ತಿರುವ ಸವಾಲುಗಳು, ಶಿಕ್ಷಕರ ಸೇವಾ ಸಮಸ್ಯೆಗಳು ಮತ್ತು ವಿವಿಧ ಬೇಡಿಕೆಗಳ ಕುರಿತು ಅಭಿಪ್ರಾಯಗಳನ್ನು ಆಲಿಸಿದರು.

ಶಿಕ್ಷಕರ ಹಿತಾಸಕ್ತಿಗೆ ಸಂಬಂಧಿಸಿದ ವಿಷಯಗಳಿಗೆ ವಿಧಾನ ಪರಿಷತ್‌ನಲ್ಲಿ ಪರಿಣಾಮಕಾರಿಯಾಗಿ ಧ್ವನಿಯಾಗಲು



ಸಮರ್ಥ ಪ್ರತಿನಿಧಿತ್ವ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಶಶೀಲ್ ನಮೋಶಿ ಅವರಿಗೆ ಮತ ನೀಡಿ ಬೆಂಬಲಿಸಬೇಕೆಂದು ತಿಪ್ಪರಾಜು ಹವಾಲ್ದಾರ್ ಮನವಿ ಮಾಡಿದರು.

ಶಿಕ್ಷಣ ವ್ಯವಸ್ಥೆಯ ಸುಧಾರಣೆ ಹಾಗೂ ಶಿಕ್ಷಕರ ಬೇಡಿಕೆಗಳಿಗೆ ಸೂಕ್ತ ಸ್ಪಂದನೆ ದೊರೆಯಬೇಕಾದರೆ ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗುವ ಪ್ರತಿನಿಧಿಯ ಪಾತ್ರ ಮಹತ್ವದ್ದಾಗಿದೆ ಎಂದು ತಿಳಿಸಿದ ಅವರು, ನಮೋಶಿ ಅವರ ಪರವಾಗಿ ಶಿಕ್ಷಕ ಮತದಾರರಲ್ಲಿ ಮತಯಾಚನೆ ನಡೆಸಿದರು.

ಈ ಸಂದರ್ಭದಲ್ಲಿ ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಅಚ್ಚುತರೆಡ್ಡಿ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂತೋಷ್ ರಾಜಗುರು, ಗಿಲ್ಲೇಸೂಗೂರು ಮಂಡಲ ಅಧ್ಯಕ್ಷ ಮಹಾಂತೇಶ ಮುಕ್ತಿ ಮಟಮಾರಿ, ಶಂಕರಗೌಡ ಮಿರ್ಜಾಪುರ, ಶರಣಪ್ಪ ನಾಮಾಲಿ, ಸುರೇಶಗೌಡ, ನವೀನ್ ಕುಮಾರ್, ಉಮೇಶ್ ಯಾಪಲದಿನ್ನಿ, ಸೂಗುರೆಡ್ಡಿಗೌಡ, ಪ್ರಕಾಶ್, ರಂಗಪ್ಪ ನಾಯಕ್, ರಜನಿಕಾಂತ್ ರೆಡ್ಡಿ, ಈರಣ್ಣ, ಜಾಕೀರ್ ಸೇರಿದಂತೆ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ಕುಡಿಯುವ ನೀರಿನ ಕಾಮಗಾರಿ ತ್ವರಿತ ಪೂರ್ಣಗೊಳಿಸಿ: ಎನ್.ಎಸ್. ಬೋಸರಾಜು ಎಚ್ಚರಿಕೆ

ಮಾನ್ವಿ: ಪಟ್ಟಣದ ಜನತೆಗೆ ಸಮರ್ಪಕ ಕುಡಿಯುವ ನೀರು ಪೂರೈಸಲು ಅಗತ್ಯ ಅನುದಾನ ಒದಗಿಸಿದ್ದರೂ ಸಮಸ್ಯೆ ಮುಂದುವರಿದಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಮಾಜಿ ಸಚಿವ ಹಾಗೂ ವಿಧಾನ ಪರಿಷತ್ ಸದಸ್ಯ ಎನ್.ಎಸ್. ಬೋಸರಾಜು, ಬಾಕಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ಶಾಶ್ವತ ಪರಿಹಾರ ಕಲ್ಪಿಸಬೇಕು. ನಿರ್ಲಕ್ಷ್ಯ ವಹಿಸಿದರೆ ಸಂಬಂಧಿಸಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಶಾಸಕ ಹಂಪಯ್ಯ ನಾಯಕ ಅವರೊಂದಿಗೆ ಅಮೃತ್-2 ಯೋಜನೆ ಹಾಗೂ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧಿಕಾರಿಗಳ ಜತೆ ರಬ್ಬಣಕಲ್ ಕೆರೆಗೆ ಭೇಟಿ ನೀಡಿದ ಅವರು, ಕೆರೆಯಲ್ಲಿನ ನೀರಿನ ಪ್ರಮಾಣ, ಪಂಪ್‌ಹೌಸ್ ಹಾಗೂ ವಿವಿಧ



ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದರು.

ಪಂಪ್‌ಹೌಸ್‌ಗೆ ಈಗಾಗಲೇ ತರಲಾಗಿರುವ ಹೊಸ ಮೋಟರ್‌ಗಳನ್ನು ಆದಷ್ಟು ಬೇಗ ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಬೇಕು. ರಬ್ಬಣಕಲ್ ಕೆರೆಯಿಂದ ನೀರು ಸರಬರಾಜಿಗೆ ಸಂಬಂಧಿಸಿದ ವಿದ್ಯುತ್ ಸಂಪರ್ಕ ಕಾಮಗಾರಿಯನ್ನೂ ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಬಳಿಕ ಕಾತರಕಿಯಲ್ಲಿ ತುಂಗಭದ್ರಾ ನದಿಯಿಂದ ರಬ್ಬಣಕಲ್ ಕೆರೆಗೆ ನೀರು ತರಲು ನಿರ್ಮಿಸಲಾಗುತ್ತಿರುವ ಜ್ಯಾಕ್ವೆಲ್ ಹಾಗೂ ಹೊಸ ಪೈಪ್‌ಲೈನ್ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಅಲ್ಲಿರುವ 100 ಕೆವಿ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್ ಅನ್ನು 250 ಕೆವಿಗೆ ಮೇಲ್ದರ್ಜೆಗೇರಿಸುವುದರ ಜೊತೆಗೆ ಜ್ಯಾಕ್ವೆಲ್ ಸಂಪರ್ಕ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸುವಂತೆ 2ನೇ ಪುಟಕ್ಕೆ

## ನಮೋಶಿ ನಾಮಪತ್ರ ಸಲ್ಲಿಕೆಗೆ ಬಿಜೆಪಿ-ಜೆಡಿಎಸ್ ಮುಖಂಡರು ಭಾಗಿ: ವೀರಣ್ಣಗೌಡ ಲೆಕ್ಕಿಹಾಳ

ರಾಯಚೂರು, ಅ.4: ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಶಶೀಲ್ ಜಿ. ನಮೋಶಿ ಅವರು ಅ.5ರಂದು ಕಲಬುರಗಿಯಲ್ಲಿ ನಾಮಪತ್ರ ಸಲ್ಲಿಸಲಿದ್ದು, ಈ ಸಂದರ್ಭದಲ್ಲಿ ರಾಯಚೂರು ಜಿಲ್ಲೆಯ ಬಿಜೆಪಿ ಹಾಗೂ ಜೆಡಿಎಸ್‌ನ ಮುಖಂಡರು, ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ವೀರಣ್ಣಗೌಡ ಲೆಕ್ಕಿಹಾಳ ತಿಳಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಸಭಾ ಚುನಾವಣೆಯ ಬಳಿಕ ಎನ್‌ಡಿಎ ಮೈತ್ರಿಕೂಟದ ಭಾಗವಾಗಿರುವ ಬಿಜೆಪಿ ಮತ್ತು ಜೆಡಿಎಸ್ ನಡುವೆ ರಾಜ್ಯಮಟ್ಟದಲ್ಲಿ ಸಮನ್ವಯ ಸಭೆಗಳು ನಡೆದಿವೆ. ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿಯೂ ಉಭಯ ಪಕ್ಷಗಳು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಲಿದ್ದು, ವರಿಷ್ಠರ ಸೂಚನೆಯಂತೆ ಶಶೀಲ್ ಜಿ. ನಮೋಶಿ ಅವರ ಪರ ಜಂಟಿಯಾಗಿ ಪ್ರಚಾರ



ನಡೆಸಲಾಗುವುದು ಎಂದರು.

ಕ್ಷೇತ್ರದಲ್ಲಿ ಈಗಾಗಲೇ ಅಭ್ಯರ್ಥಿ ಪರ ಮತಯಾಚನೆ ಆರಂಭಿಸಲಾಗಿದೆ. ಬಿಜೆಪಿ ಮತ್ತು ಜೆಡಿಎಸ್ ಶಾಸಕರು, ಮಾಜಿ ಶಾಸಕರು, ಮುಖಂಡರು ಹಾಗೂ ಕಾರ್ಯಕರ್ತರು ಯಾವುದೇ ಭಿನ್ನಾಭಿಪ್ರಾಯಗಳಿಗೆ ಅವಕಾಶ ನೀಡದೆ ಒಗ್ಗಟ್ಟಿನಿಂದ ಚುನಾವಣೆಯನ್ನು ಎದುರಿಸಬೇಕು. ಮೈತ್ರಿಕೂಟದ ಅಭ್ಯರ್ಥಿಗಳ ಗೆಲುವೇ ಪ್ರಮುಖ ಗುರಿಯಾಗಿದ್ದು, ರಾಜ್ಯ ನಾಯಕರ ನಿರ್ದೇಶನದಂತೆ ಸಂಘಟಿತ ಪ್ರಚಾರ ಕೈಗೊಳ್ಳಲಾಗುವುದು ಎಂದು ಹೇಳಿದರು.

ಮುಂಬರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಎನ್‌ಡಿಎ ಮೈತ್ರಿಕೂಟವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಪೂರ್ವಸಿದ್ಧತೆ ನಡೆಸಲಾಗುತ್ತಿದೆ. ಜಿಲ್ಲಾಮಟ್ಟದಲ್ಲಿಯೂ ಬಿಜೆಪಿ-ಜೆಡಿಎಸ್ ಸಮನ್ವಯ ಸಭೆ ಆಯೋಜಿಸಿ, ಶಾಸಕರು, ಮಾಜಿ ಶಾಸಕರು ಹಾಗೂ ಹಿರಿಯ ಮುಖಂಡರೊಂದಿಗೆ ಮುಂದಿನ ರಾಜಕೀಯ ಕಾರ್ಯತಂತ್ರದ ಕುರಿತು ಚರ್ಚಿಸಲಾಗುವುದು ಎಂದು ತಿಳಿಸಿದರು.

ಶಶೀಲ್ ಜಿ. ನಮೋಶಿ ಅವರ ತಾಯಿ ನಿಧನರಾದ ಸುದ್ದಿ ತೀವ್ರ ದುಃಖ ತಂದಿದೆ. ಈ ಕಾರಣದಿಂದ ಅವರು ನಾಮಪತ್ರ ಸಲ್ಲಿಕೆಯ ಕೊನೆಯ ದಿನವಾದ ಅ.5ರಂದು ನಾಮಪತ್ರ ಸಲ್ಲಿಸಲಿದ್ದಾರೆ ಎಂದು 2ನೇ ಪುಟಕ್ಕೆ

## ನೂತನ ಪದಾಧಿಕಾರಿಗಳ ಆಯ್ಕೆ ನಿಯಮಾನುಸಾರ: ಜಿ. ಶಿವಮೂರ್ತಿ

ರಾಯಚೂರು: ಮಡಿವಾಳ ಮಾಚಿದೇವ ಸಮಾಜದ ನೂತನ ಜಿಲ್ಲಾಧ್ಯಕ್ಷರಾಗಿ ಯು. ಆಂಜನೇಯ್ಯ ಹಾಗೂ ಗೌರವಾಧ್ಯಕ್ಷರಾಗಿ ಬಿ. ವಿರೂಪಾಕ್ಷ ಅವರನ್ನು ಸಮಾಜದ ಹಿರಿಯರು ಹಾಗೂ ಸದಸ್ಯರ ಸಮ್ಮುಖದಲ್ಲಿ ಸರ್ವಾನುಮತದಿಂದ, ನಿಯಮಾನುಸಾರ ಆಯ್ಕೆ ಮಾಡಲಾಗಿದೆ. ಈ ಆಯ್ಕೆಯನ್ನು ಅನಧಿಕೃತ ಎಂದು ಹೇಳುವ ಮೂಲಕ ಮಾಜಿ ಅಧ್ಯಕ್ಷ ಜಂಬಣ್ಣ ಯಕ್ಲಾಸಪೂರ ಅವರು ಸಮಾಜದಲ್ಲಿ ಅನಗತ್ಯ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಸಮಾಜದ ಮುಖಂಡ ಜಿ. ಶಿವಮೂರ್ತಿ ಹೇಳಿದರು.

ಭಾನುವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆ.30ರಂದು ಜಂಬಣ್ಣ ಯಕ್ಲಾಸಪೂರ ಅವರು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ನೂತನ ಅಧ್ಯಕ್ಷ ಹಾಗೂ ಗೌರವಾಧ್ಯಕ್ಷರ ಆಯ್ಕೆ ಅನಧಿಕೃತ ಎಂದು ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾಗಿವೆ ಎಂದು ಸ್ಪಷ್ಟಪಡಿಸಿದರು.

ಜಂಬಣ್ಣ ಯಕ್ಲಾಸಪೂರ ಅವರು 2023ರ ಆಗಸ್ಟ್‌ನಲ್ಲಿ ಸಮಾಜದ ಸಮುದಾಯ



ಭವನದಲ್ಲಿ ಹಿರಿಯರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಮಡಿವಾಳ ಸಮಾಜದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ನಂತರ ಅವರ ಅಧ್ಯಕ್ಷತೆಯಲ್ಲಿಯೇ ಶ್ರಾವಣ ಅಮಾವಾಸ್ಯೆ ಅಂಗವಾಗಿ ಸಮುದಾಯ ಭವನದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆದಿದ್ದು, ಈ ಕುರಿತು 2023ರ ಆಗಸ್ಟ್ 22 ಹಾಗೂ ಸೆಪ್ಟೆಂಬರ್ 5ರಂದು ಪತ್ರಿಕೆಗಳಲ್ಲಿಯೂ ವರದಿಗಳು ಪ್ರಕಟವಾಗಿವೆ ಎಂದು ತಿಳಿಸಿದರು.

2022-23ನೇ ಸಾಲಿನ ವಾರ್ಷಿಕ ಮಹಾಸಭೆಗೆ ಸಂಬಂಧಿಸಿದ ದಾಖಲೆಗಳು, ಪದಾಧಿಕಾರಿಗಳ ಆಯ್ಕೆ ಮಾಹಿತಿ ಹಾಗೂ 2019-20ರಿಂದ 2022-23ರವರೆಗಿನ ಲೆಕ್ಕಪರಿಶೋಧನಾ ವರದಿಗಳನ್ನು 2023ರ ಸೆಪ್ಟೆಂಬರ್ 13ರಂದು ಸಂಘಗಳ ನೋಂದಣಾಧಿಕಾರಿಗಳಿಗೆ ಸಲ್ಲಿಸಲಾಗಿದೆ. ಗೌರವಾಧ್ಯಕ್ಷ ಟಿ. ಮಲ್ಲೇಶ್ ಅಧ್ಯಕ್ಷತೆಯಲ್ಲಿ ನಡೆದ ವಾರ್ಷಿಕ ಮಹಾಸಭೆಯ ನಿರ್ಣಯಗಳ ಪಟ್ಟಿಯನ್ನೂ ಅಂದೇ ಸಲ್ಲಿಸಲಾಗಿದೆ ಎಂದು ಹೇಳಿದರು.

ಈ ದಾಖಲೆಗಳ ಪ್ರಕಾರ ಜಂಬಣ್ಣ ಯಕ್ಲಾಸಪೂರ ಅವರು 2023ರ ಆಗಸ್ಟ್‌ನಲ್ಲಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದು, ಅವರ ಮೂರು ವರ್ಷದ ಅವಧಿ 2026ರ ಆಗಸ್ಟ್‌ನಲ್ಲಿ ಪೂರ್ಣಗೊಂಡಿದೆ. ಹೀಗಿರುವಾಗ ಇನ್ನೂ ಒಂಬತ್ತು ತಿಂಗಳ ಅಧಿಕಾರಾವಧಿ ಬಾಕಿ ಇದೆ ಎಂದು ಹೇಳುತ್ತಿರುವುದು ಸರಿಯಲ್ಲ ಎಂದು ಶಿವಮೂರ್ತಿ ಪ್ರತಿಪಾದಿಸಿದರು. 2ನೇ ಪುಟಕ್ಕೆ

# ಸಾಹಿತಿ ಲಕ್ಷ್ಮೀದೇವಿ ಶಾಸ್ತ್ರಿ ಅವರ ಸಪ್ತ ಕೃತಿಗಳ ಲೋಕಾರ್ಪಣೆ



ರಾಯಚೂರು, ಅ.4: ಪಂಡಿತ ತಾರಾನಾಥರು ವೈದ್ಯಕೀಯ, ಸಾಹಿತ್ಯ ಹಾಗೂ ಸಾಮಾಜಿಕ ಕ್ಷೇತ್ರಗಳಿಗೆ ನೀಡಿದ ಕೊಡುಗೆ ಅಪಾರವಾಗಿದ್ದು, ಅವರ ಸೇವೆ ಮತ್ತು ಸಾಧನೆ ಸದಾ ಸ್ಮರಣೀಯವಾಗಿದೆ ಎಂದು ಹುಬ್ಬಳ್ಳಿಯ ಹಿರಿಯ ಸಾಹಿತ್ಯ ವಿದ್ವಾಂಸ ಶ್ಯಾಮಸುಂದರ ಬಿದರಕುಂದಿ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ರಾಯಚೂರಿನ ವಿಶ್ವ ಪ್ರಕಾಶನದ ಸಂಯುಕ್ತಾಶ್ರಯದಲ್ಲಿ ಭಾನುವಾರ ನಗರದ ಕನ್ನಡ ಭವನದಲ್ಲಿ ಆಯೋಜಿಸಿದ್ದ ಸಾಹಿತಿ ಲಕ್ಷ್ಮೀದೇವಿ ಶಾಸ್ತ್ರಿ ಅವರ ಏಳು ಕೃತಿಗಳ ಬಿಡುಗಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಉತ್ತರ ಕರ್ನಾಟಕದಲ್ಲಿ ಪಂಡಿತ ತಾರಾನಾಥರು ನಮ್ಮವರು ಎಂಬ ಹೆಮ್ಮೆ ರಾಯಚೂರಿನ ಜನತೆಗಿದೆ. ಅವರು ಸ್ಥಾಪಿಸಿದ ಪ್ರೇಮಾಯತನ (ಪ್ರೇಮ ಆಶ್ರಮ)ದಲ್ಲಿನ ಆಯುರ್ವೇದ ಚಿಕಿತ್ಸಾಲಯದ ಮೂಲಕ ದೇಶ-ವಿದೇಶಗಳ ಅನೇಕ ರೋಗಿಗಳಿಗೆ ಚಿಕಿತ್ಸೆ ನೀಡಲಾಗಿತ್ತು. ಅವರ ವೈದ್ಯಕೀಯ ಜ್ಞಾನ, ಸಾಹಿತ್ಯಾಸಕ್ತಿ ಮತ್ತು ಮಾನವೀಯ ಸೇವೆ ವಿಶಿಷ್ಟವಾಗಿತ್ತು ಎಂದು ತಿಳಿಸಿದರು.

ಪಂಡಿತ ತಾರಾನಾಥರಿಗೆ ಎಂಟು ಭಾಷೆಗಳ ಜ್ಞಾನವಿತ್ತು. ಉಪನಿಷತ್ತುಗಳು, ಕನ್ನಡ ವಚನಗಳು, ಕುರಾನ್, ಬೈಬಲ್ ಸೇರಿದಂತೆ ವಿವಿಧ ಧರ್ಮಗ್ರಂಥಗಳನ್ನು ಅಧ್ಯಯನ ಮಾಡಿ ಧರ್ಮ ಮತ್ತು ಮಾನವೀಯ ಮೌಲ್ಯಗಳ ಕುರಿತು ತಮ್ಮ ಬರವಣಿಗೆಯಲ್ಲಿ ವಿಚಾರಗಳನ್ನು ದಾಖಲಿಸಿದ್ದರು. ಅವರ ಬದುಕು ಮತ್ತು ಸಾಧನೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯ ಮಹತ್ವದ್ದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಲಕ್ಷ್ಮೀದೇವಿ ಶಾಸ್ತ್ರಿ ಅವರ ತುಂಗಭದ್ರೆಯ ಆಯುರ್ವೇದದಿಂದ ಆರೈಕೆಗೊಂಡ ದೇಶ-ವಿದೇಶಿಯರು, ರಾಯಚೂರು ಕೋಟೆಗೆ ನರಬಲಿ ಬಾಳೆ ಸಂಗಮ್ಮ ಮತ್ತು ಬಸರೆಡ್ಡಿ ಮಲ್ಲವ್ವ, ರಾಯಚೂರಿನ ಚಿತ್ರಕಲಾ ದಿಗ್ಗಜರು, ವಚನವರಲ್ಲಿ ಚುಟುಕುಗಳು, ಲಕ್ಷ್ಮೀದೇವಿ ಶಾಸ್ತ್ರಿ ಅವರ ಕಂಠದಲ್ಲುಳಿದ ಜನಪದಗಳು, ಸಂಶೋಧನಾ ಕೃಷಿಕ ದುರ್ಗಾ ಜಗದೀಶ್ ಹಾಗೂ ಕರ್ನಾಟಕ ಏಕೀಕರಣ ಹೋರಾಟಗಾರರ ವ್ಯಕ್ತಿಚಿತ್ರಮಾಲೆಪಂಡಿತ ತಾರಾನಾಥ ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು.

ಗದಗಿನ ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕುಲಸಚಿವ ಡಾ. ಅಮರೇಶ ಯತಗಲ್ ಕೃತಿಗಳನ್ನು ಲೋಕಾರ್ಪಣೆ ಮಾಡಿ ಮಾತನಾಡಿ, ಇತಿಹಾಸದಲ್ಲಿ ಬಹುತೇಕ ಪುರುಷರ ಸಾಧನೆಗಳನ್ನೇ ಮುನ್ನೆಲೆಗೆ ತರಲಾಗಿದ್ದು, ವಿವಿಧ ಕ್ಷೇತ್ರಗಳಲ್ಲಿ ಮಹತ್ವದ ಪಾತ್ರ ವಹಿಸಿದ ಮಹಿಳೆಯರ ಕೊಡುಗೆಗಳು ನಿರ್ಲಕ್ಷ್ಯಕ್ಕೊಳಗಾಗಿವೆ. ಇತಿಹಾಸದ ಮರುಶೋಧನೆಯಿಂದ ಮಹಿಳೆಯರ ಮಹತ್ವದ ಪಾತ್ರಗಳು ಬೆಳಕಿಗೆ ಬರುತ್ತಿವೆ ಎಂದರು.

ದೇವಸ್ಥಾನ, ಕೋಟೆಗಳ ನಿರ್ಮಾಣದಿಂದ ಹಿಡಿದು ಸಮಾಜದ ಅಭಿವೃದ್ಧಿವರೆಗೆ ಮಹಿಳೆಯರು ಹಾಗೂ ಸೇವಕಿಯರು ಮಹತ್ವದ ಕೊಡುಗೆ ನೀಡಿದ್ದಾರೆ. ಇಂತಹ ಅಜ್ಞಾತ ಸಾಧಕಿಯರ ಬದುಕು ಮತ್ತು ಕೊಡುಗೆಗಳನ್ನು ಸಂಶೋಧನೆಯ ಮೂಲಕ ದಾಖಲಿಸುವ ಅಗತ್ಯವಿದೆ ಎಂದು ಹೇಳಿದರು.

ಹಿರಿಯ ಚಿತ್ರಕಲಾವಿದ ವಾಜಿದ್ ಸಾಜಿದ್ ರಾಯಚೂರಿನ ಚಿತ್ರಕಲಾ ದಿಗ್ಗಜರು ಕೃತಿಯನ್ನು ಪರಿಚಯಿಸಿದರು. ಸಂಶೋಧನಾ ವಿದ್ವಾಂಸ ಡಾ. ಚನ್ನಬಸವಯ್ಯ ಹಿರೇಮಠ ಅವರು ವಚನವರಲ್ಲಿ ಚುಟುಕುಗಳು ಹಾಗೂ ಲಕ್ಷ್ಮೀದೇವಿ ಶಾಸ್ತ್ರಿ ಅವರ ಕಂಠದಲ್ಲುಳಿದ ಜನಪದಗಳು ಕೃತಿಗಳ ಕುರಿತು ಮಾತನಾಡಿದರು.

ರಾಯಚೂರು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲೆ ಡಾ. ಸುಗುಣ ಬಸವರಾಜ್ ಅವರು ಸಂಶೋಧನಾ ಕೃಷಿಕ ದುರ್ಗಾ ಜಗದೀಶ್ ಹಾಗೂ ಕರ್ನಾಟಕ ಏಕೀಕರಣ ಹೋರಾಟಗಾರರ ವ್ಯಕ್ತಿಚಿತ್ರಮಾಲೆಪಂಡಿತ ತಾರಾನಾಥ ಕೃತಿಗಳನ್ನು ಪರಿಚಯಿಸಿದರು. ಲೇಖಕಿ ಲಕ್ಷ್ಮೀದೇವಿ ಶಾಸ್ತ್ರಿ ತಮ್ಮ ಕೃತಿಗಳ ರಚನೆಯ ಹಿನ್ನೆಲೆ ಕುರಿತು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ರಂಗಣ್ಣ ಪಾಟೀಲ ಅಳ್ಳುಂಡಿ ಮಾತನಾಡಿ, ಲೇಖಕರಿಗೆ ಒಂದು ಕೃತಿ ಪ್ರಕಟವಾದಾಗ ದೊರೆಯುವ ಸಂತೋಷವೇ ವಿಶಿಷ್ಟವಾದುದು. ಕಥೆ, ಕಾವ್ಯ, ನಾಟಕ ಸೇರಿದಂತೆ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಕೃತಿಗಳನ್ನು ಹೊರತರುವ ಸಾಹಿತಿಗಳು ಮತ್ತು ಲೇಖಕರಿಗೆ ಸರ್ಕಾರದಿಂದ ಅಗತ್ಯ ಪ್ರೋತ್ಸಾಹ ಹಾಗೂ ಸೌಲಭ್ಯಗಳು ದೊರೆಯಬೇಕು ಎಂದರು.

ವೇದಿಕೆಯಲ್ಲಿ ಮ್ಯಾದಾರ ಲಲಿತಕಲಾ ಪ್ರತಿಷ್ಠಾನದ ಅಧ್ಯಕ್ಷ ಎಚ್.ಎಚ್. ಮ್ಯಾದರ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಬಿ. ವಿಜಯ ರಾಜೇಂದ್ರ, ಗೌರವ ಕಾರ್ಯದರ್ಶಿ ರಾವುತರಾವ್ ಬರೂರ ಉಪಸ್ಥಿತರಿದ್ದರು.

ಬೆಂಗಳೂರಿನ ಇನ್ಫೋಸಿಸ್ ಹಿರಿಯ ಅಭಿಯಂತರ ವಿಶ್ವನಾಥ ಶಾಸ್ತ್ರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಹಿರಿಯ ಸಾಹಿತಿ ಹಾಗೂ ವಿಮರ್ಶಕ ಡಾ. ಗವಿಸಿದ್ದಪ್ಪ ಎಚ್. ಪಾಟೀಲ್ ಕಾರ್ಯಕ್ರಮ ನಿರ್ವಹಿಸಿದರು.

ಸಾಹಿತಿಗಳಾದ ವಿ.ಎನ್. ಅಕ್ಕಿ, ಅಯ್ಯಪ್ಪಯ್ಯ ಹುಡಾ, ಬಾಬು ಭಂಡಾರಿಗಲ್, ನಾಗಪ್ಪ ಹೊರಪ್ಯಾಟಿ, ದಾನಮ್ಮ ಸುಭಾಷ್ ಚಂದ್ರ, ಬಶೀರ ಅಹ್ಮದ್ ಹೊಸಮನಿ, ಈರಣ್ಣ ಬೆಂಗಾಲಿ ಸೇರಿದಂತೆ ಜಿಲ್ಲಾ ಮತ್ತು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು, ಸಾಹಿತಿಗಳು, ಲಕ್ಷ್ಮೀದೇವಿ ಶಾಸ್ತ್ರಿ ಅವರ ಕುಟುಂಬದ ಸದಸ್ಯರು ಹಾಗೂ ಸಾಹಿತ್ಯಾಸಕ್ತರು ಭಾಗವಹಿಸಿದ್ದರು.

## ಅ.11ರಿಂದ ಕಲ್ಮಠದ 51ನೇ ವರ್ಷದ ದಸರಾ ಮಹೋತ್ಸವ



ಮಾನ್ವಿ: ಪಟ್ಟಣದ ಮುಕ್ತಾಗುಚ್ಛ ಬೃಹನ್ಮಠ ಕಲ್ಮಠದ 51ನೇ ವರ್ಷದ ದಸರಾ ಮಹೋತ್ಸವದ ಅಂಗವಾಗಿ ಅ.11ರಿಂದ 23ರವರೆಗೆ ಶ್ರೀಮಠದ ಆವರಣದಲ್ಲಿ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಲ್ಮಠದ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ತಿಳಿಸಿದ್ದಾರೆ.

ಅ.11ರಂದು ಬೆಳಿಗ್ಗೆ 11 ಗಂಟೆಗೆ ಶ್ರೀದೇವಿಯ ರಜತ ಮೂರ್ತಿ ಪ್ರತಿಷ್ಠಾಪನೆ ಹಾಗೂ 108 ಬಾಲ ಮುತ್ತೈದೆಯರ ಪಾದಪೂಜೆಯೊಂದಿಗೆ ದಸರಾ ಮಹೋತ್ಸವಕ್ಕೆ ಚಾಲನೆ ದೊರೆಯಲಿದೆ. ಪ್ರತಿದಿನ ಸಂಜೆ 6.30ರಿಂದ ರಾತ್ರಿ 8.30ರವರೆಗೆ ಇಲಕಲ್ ಗುಡೂರು ಹಿರೇಮಠದ ಶ್ರೀ ಅನ್ನದಾನ ಸ್ವಾಮಿಗಳಿಂದ ಶ್ರೀದೇವಿ ಪುರಾಣ ಪ್ರವಚನ ನಡೆಯಲಿದೆ.

ಅ.20ರಂದು ಸರ್ವಧರ್ಮ ಸಮ್ಮೇಳನ ಆಯೋಜಿಸಲಾಗಿದ್ದು, ವಿವಿಧ ಧರ್ಮಗಳ ಗಣ್ಯರು ಭಾಗವಹಿಸಲಿದ್ದಾರೆ. ಅ.21ರಂದು ವಿಜಯದಶಮಿ ಆಚರಣೆ ಹಾಗೂ ಗುರುಗಳಿಗೆ ಭಕ್ತರಿಂದ ಬನ್ನಿ ಸಮರ್ಪಣೆ ಕಾರ್ಯಕ್ರಮ ನಡೆಯಲಿದೆ.

ಅ.22ರಂದು ಶ್ರೀದೇವಿ ಪುರಾಣ ಪ್ರವಚನದ ಮಹಾಮಂಗಲ ನಡೆಯಲಿದ್ದು, 1001 ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಆಯೋಜಿಸಲಾಗಿದೆ. ಇದೇ ಸಂದರ್ಭದಲ್ಲಿ ಲಿಂ. ಭೀಮಪ್ಪ ಬಂಗಾರಿ ಅವರ ಸ್ಮರಣಾರ್ಥ ಕಲ್ಮಠ ವಿದ್ಯಾಸಂಸ್ಥೆಯಲ್ಲಿ ಉತ್ತಮ ಸಾಧನೆ ತೋರಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು.

ಅ.23ರಂದು ಬೆಳಿಗ್ಗೆ 8 ಗಂಟೆಗೆ ಶ್ರೀಮಠದಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆ ನಡೆಯಲಿದೆ. ಸುಮಂಗಲಿಯರು ಕಳಸ-ಕುಂಭಗಳೊಂದಿಗೆ ಮಹಾಲಕ್ಷ್ಮೀ ದೇವಸ್ಥಾನದವರೆಗೆ ತೆರಳಿ ಗಂಗೆ ಪೂಜೆ ನೆರವೇರಿಸಲಿದ್ದಾರೆ. ಬಳಿಕ ಪವಿತ್ರ ಗಂಗೆಯನ್ನು ತಂದು ಚೌಡೇಶ್ವರಿ ದೇವಿಗೆ ಅಭಿಷೇಕ ನೆರವೇರಿಸಲಾಗುವುದು.

ಮೆರವಣಿಗೆಯಲ್ಲಿ ವಿವಿಧ ಜನಪದ ಕಲಾತಂಡಗಳು ಹಾಗೂ ವಾದ್ಯಮೇಳಗಳೊಂದಿಗೆ ಶ್ರೀ ಭುವನೇಶ್ವರಿಯ ರಜತ ಮೂರ್ತಿಯ ಭವ್ಯ ಮೆರವಣಿಗೆ ನಡೆಯಲಿದೆ. ಬಿಚ್ಚಾಲಿ ಸಂಸ್ಥಾನ ಮಠದ ಗಜಲಕ್ಷ್ಮೀ ಮೇಲೆ ಶ್ರೀ ಜಗನ್ಮಾತೆಯ ಮೂರ್ತಿಯ ಮೆರವಣಿಗೆಯೂ ನಡೆಯಲಿದೆ. ರೈತರ ಬಂಡಿಗಳಲ್ಲಿ ವಿವಿಧ ಧರ್ಮಗಳ ಮಹನೀಯರನ್ನು ಪರಿಚಯಿಸುವ ಸ್ತಬ್ಧಚಿತ್ರಗಳು ಮೆರವಣಿಗೆಯ ವಿಶೇಷ ಆಕರ್ಷಣೆಯಾಗಲಿವೆ. ವಿವಿಧ ಮಠಗಳ ಶ್ರೀಗಳು, ಜನಪ್ರತಿನಿಧಿಗಳು ಹಾಗೂ ಗಣ್ಯರು ಭಾಗವಹಿಸಲಿದ್ದಾರೆ.

ಅಂದು ಮಧ್ಯಾಹ್ನ 1 ಗಂಟೆಗೆ ಶ್ರೀಮಠದಲ್ಲಿ ಮಹಾಗಣಾರಾಧನೆ ನಡೆಯಲಿದ್ದು, ಭಕ್ತರು, ಸಾರ್ವಜನಿಕರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದಸರಾ ಮಹೋತ್ಸವವನ್ನು ಯಶಸ್ವಿಗೊಳಿಸುವಂತೆ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಕೋರಿದ್ದಾರೆ.

**ಅಮೃತ ವಾಣಿ**

**ಅಹಂಕಾರದ ಮದವೇರಿದವರಿಗೆ ತನ್ನ ತಪ್ಪುಬಿಟ್ಟು ಉಳಿದೆಲ್ಲರ ತಪ್ಪು ಕಾಣಿಸುತ್ತದೆ**

**1606 ನೇಯ ದಿನಕ್ಕೆ ಏಮ್ಸ್ ಹೋರಾಟ**

## ವಿಕಲಚೇತನರಿಗೆ ಆಹಾರ ಕಿಟ್ ವಿತರಿಸಿ ಅಶೋಕ ಜೈನ್ ಹುಟ್ಟುಹಬ್ಬ ಆಚರಣೆ



ಲಿಂಗಸುಗೂರು: ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಸಂಘಟನಾ ಕಾರ್ಯದರ್ಶಿ ಹಾಗೂ ರಾಯಚೂರು ಜಿಲ್ಲಾಧ್ಯಕ್ಷ ಅಶೋಕ ಕುಮಾರ್ ಸಿ.ಕೆ. ಜೈನ್ ಅವರ ಹುಟ್ಟುಹಬ್ಬವನ್ನು ಕರವೇ ಶಿವರಾಮೇಗೌಡ ಬಣದ ತಾಲೂಕು ಘಟಕದ ಪದಾಧಿಕಾರಿಗಳು ವಿಕಲಚೇತನರೊಂದಿಗೆ ಸರಳ ಹಾಗೂ ಅರ್ಥಪೂರ್ಣವಾಗಿ ಆಚರಿಸಿದರು.

ಹುಟ್ಟುಹಬ್ಬದ ಹೆಸರಿನಲ್ಲಿ ಅನಗತ್ಯವಾಗಿ ಹಣ ವ್ಯಯಿಸುವ ಬದಲು ಸಂಕಷ್ಟದಲ್ಲಿರುವವರಿಗೆ ನೆರವಾಗಬೇಕು ಎಂಬ ಉದ್ದೇಶದಿಂದ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ವೇಳೆ ವಿಕಲಚೇತನರ ಸಮ್ಮುಖದಲ್ಲಿ ಕೇಕ್ ಕತ್ತರಿಸಿ, ಅವರಿಗೆ ಆಹಾರ ಕಿಟ್‌ಗಳನ್ನು ವಿತರಿಸುವ ಮೂಲಕ ಅಶೋಕ ಜೈನ್ ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ಸಾಮಾಜಿಕ ಕಳಕಳಿಯೊಂದಿಗೆ ಹುಟ್ಟುಹಬ್ಬದಂತಹ ವಿಶೇಷ ದಿನಗಳನ್ನು ಆಚರಿಸುವುದರಿಂದ ಅಗತ್ಯವಿರುವವರಿಗೆ ನೆರವು ದೊರೆಯುವುದರ ಜೊತೆಗೆ ಸಮಾಜಕ್ಕೆ ಉತ್ತಮ ಸಂದೇಶ ನೀಡಲು ಸಾಧ್ಯ ಎಂದು ಪದಾಧಿಕಾರಿಗಳು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಕರವೇ ತಾಲೂಕು ಅಧ್ಯಕ್ಷ ಮಾದೇಶ ಸರ್ಜಾಪುರ, ಉಪಾಧ್ಯಕ್ಷ ಬಸವರಾಜ ಪೇರಿ, ಪ್ರಧಾನ ಕಾರ್ಯದರ್ಶಿ ಶರಣಬಸವ ಈಚನಾಳ, ಸಂಘಟನಾ ಕಾರ್ಯದರ್ಶಿ ಮುತ್ತಣ್ಣ ಗುಡಿಹಾಳ, ಖಜಾಂಚಿ ಮಹಾಂತೇಶ ಹೂಗಾರ, ನಗರ ಘಟಕ ಅಧ್ಯಕ್ಷ ರಾಜು ರೆಡ್ಡಿ, ನಗರ ಘಟಕ ಉಪಾಧ್ಯಕ್ಷ ಜಗನ್ನಾಥ ಜಾಧವ್, ಡಾ. ಪಂಪಣ್ಣ, ದುರುಗೇಶ ನಾಯಕ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಸ್ವಾವಲಂಬಿ ಬದುಕಿಗೆ ನೆರವು: 8 ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ ವಿತರಣೆ



ಮಾನ್ವಿ: ಮಹಿಳೆಯರು ತಮ್ಮ ಕೌಶಲ್ಯ ಮತ್ತು ಸಾಮರ್ಥ್ಯದ ಮೇಲೆ ವಿಶ್ವಾಸವಿಟ್ಟು ಆರ್ಥಿಕವಾಗಿ ಸ್ವಾವಲಂಬಿ ಬದುಕು ರೂಪಿಸಿಕೊಳ್ಳಬೇಕು ಎಂದು ಪೋತ್ನಾಳದ ವಿಮುಕ್ತಿ ಚಾರಿಟೇಬಲ್ ಟ್ರಸ್ಟ್ ನಿರ್ದೇಶಕ ಸತೀಶ್ ಫೆರ್ನಾಂಡಿಸ್ ಹೇಳಿದರು.

ತಾಲೂಕಿನ ಪೋತ್ನಾಳ ಗ್ರಾಮದಲ್ಲಿ ವಿಮುಕ್ತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಉಚಿತ ಹೊಲಿಗೆ ಯಂತ್ರ ವಿತರಣಾ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳನ್ನು ವಿತರಿಸಿ ಅವರು ಮಾತನಾಡಿದರು.

ಗ್ರಾಮೀಣ ಭಾಗದ ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ಸ್ವಯಂ ಉದ್ಯೋಗದ ಮೂಲಕ ಆದಾಯ ಗಳಿಸಲು ಪ್ರೋತ್ಸಾಹ ನೀಡುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ವಿಧವೆಯರು, ವಿಕಲಚೇತನ ವ್ಯಕ್ತಿಗಳ ಕುಟುಂಬದ ಸದಸ್ಯರು ಹಾಗೂ ಆರ್ಥಿಕವಾಗಿ ಹಿಂದುಳಿದ ಮಹಿಳೆಯರನ್ನು ಗುರುತಿಸಿ ಒಟ್ಟು 8 ಫಲಾನುಭವಿಗಳಿಗೆ ಉಚಿತವಾಗಿ ಹೊಲಿಗೆ ಯಂತ್ರಗಳನ್ನು ವಿತರಿಸಲಾಗಿದೆ ಎಂದು ತಿಳಿಸಿದರು.

ಮಹಿಳೆಯರು ಹೊಲಿಗೆ ಕೌಶಲ್ಯವನ್ನು ಸಮರ್ಪಕವಾಗಿ ಬಳಸಿಕೊಂಡು ಕುಟುಂಬದ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕು. ಸ್ವಯಂ ಉದ್ಯೋಗವು ಮಹಿಳೆಯರಲ್ಲಿ ಆತ್ಮವಿಶ್ವಾಸ ಹೆಚ್ಚಿಸುವುದರ ಜೊತೆಗೆ ಸ್ವಾವಲಂಬಿ ಜೀವನಕ್ಕೆ ದಾರಿಯಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಚಾರ್ಲಿ ಉದ್ಬಾಳ, ಶಂಕರಪ್ಪ ಜೀನೂರು ಕ್ಯಾಂಪ್, ರಿಯಾಜ್ ಬೇಗಂ ಖರಾಬದಿನ್ನಿ ಹಾಗೂ ಸಂಸ್ಥೆಯ ಸಿಬ್ಬಂದಿಗಳಾದ ಜೆಸ್ಸಿಂತಾ ಮುದ್ದನಗುಡ್ಡಿ, ಮಮತಾ, ಹುಚ್ಚಪ್ಪ, ಆರೋಗ್ಯಪ್ಪ ದುಮತಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಕೇಂದ್ರದ ವಿಳಂಬ ನೀತಿ ವಿರುದ್ಧ ಹೋರಾಟಕ್ಕೆ EPS-95 ಪಿಂಚಣಿದಾರರ ಎಚ್ಚರಿಕೆ



ಯಾದಗಿರಿ, ಅ.4: EPS-95 ಭವಿಷ್ಯನಿಧಿ ನಿವೃತ್ತ ಪಿಂಚಣಿದಾರರ ಬೇಡಿಕೆಗಳ ಈಡೇರಿಕೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ನೀಡಿರುವ ಭರವಸೆಗಳ ಅನುಷ್ಠಾನ ಮತ್ತಷ್ಟು ವಿಳಂಬವಾದರೆ ಸರ್ಕಾರದ ವಿರುದ್ಧ ಉಗ್ರ ಹೋರಾಟ ನಡೆಸುವುದು ಅನಿವಾರ್ಯವಾಗಲಿದೆ ಎಂದು EPS-95 ಪಿಂಚಣಿದಾರರ ಮುಖಂಡರು ಎಚ್ಚರಿಸಿದರು.

ನಗರದ ಶ್ರೀ ತಾಯಮ್ಮ ದೇವಿ ಕಲ್ಯಾಣ ಮಂಟಪದಲ್ಲಿ ಭಾನುವಾರ EPS-95 NAC ಯಾದಗಿರಿ ಜಿಲ್ಲಾ ಘಟಕದ ವತಿಯಿಂದ ಆಯೋಜಿಸಿದ್ದ ಜಿಲ್ಲಾ ಸಮಾವೇಶದಲ್ಲಿ ಪಿಂಚಣಿದಾರರ ದೀರ್ಘಕಾಲದ ಬೇಡಿಕೆಗಳು ಹಾಗೂ ಹೋರಾಟದ ಮುಂದಿನ ರೂಪುರೇಷೆಗಳ ಕುರಿತು ಚರ್ಚಿಸಲಾಯಿತು.

ಸಮಾವೇಶದಲ್ಲಿ ರಾಯಚೂರು ವಿಭಾಗದಿಂದ ಸುಮಾರು 45ಕ್ಕೂ ಹೆಚ್ಚು ಸದಸ್ಯರು ಸೇರಿದಂತೆ ವಿವಿಧ ಭಾಗಗಳಿಂದ ಒಟ್ಟು 350ಕ್ಕೂ ಹೆಚ್ಚು EPS-95 ನಿವೃತ್ತ ಪಿಂಚಣಿದಾರರು ಭಾಗವಹಿಸಿದ್ದರು.

ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಮುಖಂಡರು, EPS-95 ನಿವೃತ್ತ ಪಿಂಚಣಿದಾರರು ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಹಲವು ವರ್ಷಗಳಿಂದ ನಿರಂತರ ಹೋರಾಟ ನಡೆಸುತ್ತಿದ್ದಾರೆ. ಆದರೂ ಕೇಂದ್ರ ಸರ್ಕಾರದಿಂದ ನಿರೀಕ್ಷಿತ ಸ್ಪಂದನೆ ದೊರೆಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪಿಂಚಣಿದಾರರ ಸಮಸ್ಯೆಗಳನ್ನು ಪರಿಹರಿಸುವ ಕುರಿತು ಕೇಂದ್ರ ಸರ್ಕಾರ ನೀಡಿರುವ ಭರವಸೆಗಳು ಶೀಘ್ರ ಅನುಷ್ಠಾನಗೊಳ್ಳಬೇಕು. ನಿವೃತ್ತಿಯ ನಂತರ ಜೀವನ ನಿರ್ವಹಣೆಗೆ ಪಿಂಚಣಿಯನ್ನೇ ಅವಲಂಬಿಸಿರುವ ಹಿರಿಯ ನಾಗರಿಕರ ಸಮಸ್ಯೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಭರವಸೆಗಳ ಅನುಷ್ಠಾನದಲ್ಲಿ ಮತ್ತಷ್ಟು ವಿಳಂಬವಾದರೆ ಸಂಘಟಿತ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಹೇಳಿದರು.

ವೇದಿಕೆಯಲ್ಲಿ ಅಖಿಲ ಭಾರತ ಪ್ರಧಾನ ಸಂಯೋಜಕ ರಾಮಕಾಂತ್ ನರಗುಂದ, ಪ್ರಾಂತ ಖಜಾಂಚಿ ಕುಲಕರ್ಣಿ, ಯಾದಗಿರಿ ಜಿಲ್ಲಾ ಘಟಕದ ಅಧ್ಯಕ್ಷ ಸಿದ್ದನಗೌಡ, ಉಪಾಧ್ಯಕ್ಷ ನಾಗಿರೆಡ್ಡಿ, ಹಿರಿಯ ಪದಾಧಿಕಾರಿಗಳಾದ ಹೊನ್ನಪ್ಪ, ಕೆ.ಟಿ. ಜಾಧವ, ರಾಯಚೂರು ವಿಭಾಗದ ಗೌರವಾಧ್ಯಕ್ಷ ಭೀಮಸೇನ್ ರಾವ್ ಹಾಗೂ ಪ್ರಧಾನ ಕಾರ್ಯದರ್ಶಿ ಪರಶುರಾಮ್ ಉಪಸ್ಥಿತರಿದ್ದರು.

ಸಮಾವೇಶದಲ್ಲಿ ಸಂಘದ ಹಿರಿಯರಾದ ಹಂಪಯ್ಯ ಸ್ವಾಮಿ, ಬಾಳಪ್ಪ ಲಿಂಗಸುಗೂರು, ಖಜಾಂಚಿ ವೀರೇಶ್ ಬಾಬು, ಬಾಲಾಜಿ ರಾವ್, ವೈ. ಮಲ್ಲಿಕಾರ್ಜುನ, ಎನ್. ಬಸವರಾಜ್, ಹುಲಿಗಪ್ಪ ಸೇರಿದಂತೆ ಅನೇಕ ಪದಾಧಿಕಾರಿಗಳು ಹಾಗೂ ಸದಸ್ಯರು ಭಾಗವಹಿಸಿದ್ದರು.

ಯಾದಗಿರಿ ಜಿಲ್ಲಾ ಸಂಘಟನೆಯ ವತಿಯಿಂದ ಸಮಾವೇಶಕ್ಕೆ ಆಗಮಿಸಿದ ಸದಸ್ಯರಿಗೆ ಉಪಾಹಾರ ಹಾಗೂ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಅನಾರೋಗ್ಯದ ಕಾರಣ ಪ್ರಧಾನ ಕಾರ್ಯದರ್ಶಿ ಮಲ್ಲಾರೆಡ್ಡೆಪ್ಪ ಹಾಗೂ ಅನಿವಾರ್ಯ ಕಾರಣಗಳಿಂದ ವೀರಭದ್ರಪ್ಪ ಅಂಬರ್‌ಪೇಟೆ ಸಮಾವೇಶದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ ಎಂದು ಸಂಘಟಕರು ತಿಳಿಸಿದರು.

# ಮೊದಲನೇ ಪುಟದಿಂದ

## ವಿಮಾನ ಪತನಗೊಳಿಸುವುದೇ ಉದ್ದೇಶವಾಗಿತ್ತು: ಫ್ಲೈದುಬೈ ಸಹ ಪೈಲಟ್‌ನ ಹೇಳಿಕೆ

ಎಂದು ವರದಿಗಳು ತಿಳಿಸಿವೆ.

2024ರಲ್ಲಿ ಓಮನ್ ಏರ್‌ನಲ್ಲಿ ಸಹ ಪೈಲಟ್ ತರಬೇತುದಾರನಾಗಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಹಮ್ಮಾಮಿಯ ಬಳಿ ತೀವ್ರಗಾಮಿ ವಿಷಯಗಳಿಗೆ ಸಂಬಂಧಿಸಿದ ಸಾಮಗ್ರಿಗಳು ಪತ್ತೆಯಾಗಿದ್ದವು ಎಂಬ ಮಾಹಿತಿಯೂ ತನಿಖೆಯ ಭಾಗವಾಗಿದೆ. ಬಳಿಕ ಆತನನ್ನು ಹಾರಾಟದ ಕರ್ತವ್ಯದಿಂದ ತೆಗೆದು ಕಚೇರಿ ಕೆಲಸಕ್ಕೆ ನಿಯೋಜಿಸಲಾಗಿತ್ತು ಎನ್ನಲಾಗಿದೆ.

ಓಮನ್ ಏರ್ ತೊರೆದ ಬಳಿಕ ಹಮ್ಮಾಮಿ ಬೇರೆ ವಿಮಾನಯಾನ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದ್ದು, ಅಂತಿಮವಾಗಿ 2026ರ ಫೆಬ್ರವರಿಯಲ್ಲಿ ಫ್ಲೈದುಬೈ ಸೇರಿದ್ದ ಎನ್ನಲಾಗಿದೆ. ಹಿಂದಿನ ಉದ್ಯೋಗದ ಅವಧಿಯಲ್ಲಿ ಆತನ ವಿರುದ್ಧ ವ್ಯಕ್ತವಾಗಿದ್ದ ಭದ್ರತಾ ಕಳವಳಗಳ ಮಾಹಿತಿ ನೇಮಕಾತಿ ಸಂದರ್ಭದಲ್ಲಿ ಫ್ಲೈದುಬೈಗೆ ಸಮರ್ಪಕವಾಗಿ ತಲುಪಿತ್ತೇ ಎಂಬುದನ್ನೂ ತನಿಖಾಧಿಕಾರಿಗಳು ಪರಿಶೀಲಿಸುತ್ತಿದ್ದಾರೆ.

ಹಮ್ಮಾಮಿ ಈ ಹಿಂದೆ ಸಿರಿಯಾದಲ್ಲಿ ಕಳೆದಿದ್ದ ಅವಧಿಯ ಬಗ್ಗೆಯೂ ತನಿಖೆ ನಡೆಯುತ್ತಿದೆ. ಓಮನ್ ಮೂಲದ ತಂದೆ ಮತ್ತು ಸಿರಿಯನ್ ಮೂಲದ ತಾಯಿಗೆ ಜನಿಸಿರುವ ಆತನ ಹಿನ್ನೆಲೆ, ಹಿಂದಿನ ಚಟುವಟಿಕೆಗಳು ಹಾಗೂ ತೀವ್ರಗಾಮಿ ಸಿದ್ಧಾಂತಗಳೊಂದಿಗೆ ಯಾವುದಾದರೂ ಸಂಪರ್ಕವಿತ್ತೇ ಎಂಬುದನ್ನು ತನಿಖಾ ಸಂಸ್ಥೆಗಳು ಪರಿಶೀಲಿಸುತ್ತಿವೆ.

ಹಮ್ಮಾಮಿ ಸಾಮಾಜಿಕ ಜಾಲತಾಣಗಳಲ್ಲಿ ವಿಮಾನಯಾನ ಮತ್ತು ವಿಮಾನ ಚಾಲನಾ ತರಬೇತಿಯ ಕುರಿತು ಆಸಕ್ತಿ ವ್ಯಕ್ತಪಡಿಸಿದ್ದ ಎನ್ನಲಾಗಿದೆ. ತನ್ನ ಮೊದಲ ಏಕಾಂಗಿ ಹಾರಾಟ ಹಾಗೂ ಪ್ರಯಾಣಿಕರ ವಿಮಾನವನ್ನು ಮೊದಲ ಬಾರಿಗೆ ಇಳಿಸಿದ ಅನುಭವಗಳನ್ನೂ ಆತ ಹಿಂದಿನ ಪೋಸ್ಟ್‌ಗಳಲ್ಲಿ ಹಂಚಿಕೊಂಡಿದ್ದ ಎಂದು ವರದಿಯಾಗಿದೆ.

ಘಟನೆಗೆ ನಿಖರ ಕಾರಣವೇನು, ಕ್ಯಾಪ್ಟನ್ ಮೇಲಿನ ದಾಳಿಯ ಹಿಂದಿನ ಉದ್ದೇಶ ಮತ್ತು ಹಿಂದಿನ ಭದ್ರತಾ ಕಳವಳಗಳಿದ್ದರೂ ಹಮ್ಮಾಮಿ ಮತ್ತೆ ವಾಣಿಜ್ಯ ವಿಮಾನದ ಕಾಕ್‌ಪಿಟ್‌ಗೆ ಹೇಗೆ ಮರಳಿದ ಎಂಬ ಅಂಶಗಳ ಕುರಿತು ತನಿಖೆ ಮುಂದುವರಿದಿದೆ.

## ನೋಟಿಸ್, ವಿಚಾರಣೆ ಇಲ್ಲದೆ ಮತದಾರರ ಪಟ್ಟಿಯಿಂದ ಹೆಸರು ತೆಗೆದುಹಾಕುವಂತಿಲ್ಲ: ನ್ಯಾ. ಉಜ್ಜಲ್ ಭುಯಾನ್

ಮಿಗಿಲಾದವರು ಯಾರೂ ಇಲ್ಲ. ಯಾವುದೇ ಪ್ರಾಧಿಕಾರವು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ನಡೆದುಕೊಳ್ಳಲು ಸಾಧ್ಯವಿಲ್ಲ ಮತ್ತು ನ್ಯಾಯಾಲಯವೂ ಅಂತಹ ಪ್ರಕ್ರಿಯೆಯನ್ನು ಅನುಮೋದಿಸಲು ಸಾಧ್ಯವಿಲ್ಲ'' ಎಂದು ಅವರು ಹೇಳಿದರು.

ಮತದಾರರ ಪಟ್ಟಿಯಿಂದ ಹೆಸರು ತೆಗೆದುಹಾಕುವ ಪ್ರಕ್ರಿಯೆಯ ಕುರಿತು ಮಾತನಾಡಿದ ಅವರು, ಮೃತಪಟ್ಟ ಮತದಾರರ ಪ್ರಕರಣವನ್ನು ಹೊರತುಪಡಿಸಿ, ಒಮ್ಮೆ ಮತದಾರರ ಪಟ್ಟಿಯಲ್ಲಿ ಹೆಸರು ದಾಖಲಾಗಿದ್ದರೆ ಸಂಬಂಧಪಟ್ಟ ವ್ಯಕ್ತಿಗೆ ನೋಟಿಸ್ ನೀಡಬೇಕು. ಅಲ್ಲದೆ, ಆ ವ್ಯಕ್ತಿಗೆ ತನ್ನ ವಾದವನ್ನು ಮಂಡಿಸಲು ಸೂಕ್ತ ಅವಕಾಶ ನೀಡಿದ ನಂತರವೇ ಕಾನೂನುಬದ್ಧ ಕ್ರಮ ಅನುಸರಿಸಬೇಕು ಎಂದು ಹೇಳಿದರು.

ಮತದಾನದ ಹಕ್ಕನ್ನು ನ್ಯಾಯಾಲಯಗಳು ಮೂಲಭೂತ ಹಕ್ಕು ಎಂದು ಪರಿಗಣಿಸದಿದ್ದರೂ ಅದು ಸಾಂವಿಧಾನಿಕ ಹಕ್ಕಾಗಿದೆ. ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳು ಪ್ರಜಾಪ್ರಭುತ್ವದ ಅಡಿಪಾಯವಾಗಿದ್ದು, ನಾಗರಿಕರ ಮತದಾನದ ಹಕ್ಕು ಆ ವ್ಯವಸ್ಥೆಯಲ್ಲಿ ಅತ್ಯಂತ ಮಹತ್ವದ ಸ್ಥಾನ ಹೊಂದಿದೆ ಎಂದು ನ್ಯಾ. ಉಜ್ಜಲ್ ಭುಯಾನ್ ಹೇಳಿದರು.

## ಕುಡಿಯುವ ನೀರಿನ ಕಾಮಗಾರಿ ತ್ವರಿತ ಪೂರ್ಣಗೊಳಿಸಿ: ಎನ್.ಎಸ್. ಬೋಸರಾಜು ಎಚ್ಚರಿಕೆ

ಸೂಚಿಸಿದರು.

ಇದೇ ವೇಳೆ ಮಾನ್ವಿ ಪಟ್ಟಣದ ಎಪಿಎಂಸಿ ಆವರಣದಲ್ಲಿರುವ 12.5 ಲಕ್ಷ ಲೀಟರ್ ಸಾಮರ್ಥ್ಯದ ನೀರಿನ ಟ್ಯಾಂಕ್ ಹಾಗೂ ಜಯನಗರದಲ್ಲಿ ನಿರ್ಮಾಣವಾಗುತ್ತಿರುವ 7.5 ಲಕ್ಷ ಲೀಟರ್ ಸಾಮರ್ಥ್ಯದ ಪ್ರತ್ಯೇಕ ನೀರಿನ ಟ್ಯಾಂಕ್ ಕಾಮಗಾರಿಗಳನ್ನೂ ಪರಿಶೀಲಿಸಿದರು. ಬಾಕಿ ಕಾಮಗಾರಿಗಳನ್ನು ತಿಂಗಳ ಅಂತ್ಯದೊಳಗೆ ಪೂರ್ಣಗೊಳಿಸಿ ಪಟ್ಟಣಕ್ಕೆ ಸಮರ್ಪಕವಾಗಿ ನೀರು ಪೂರೈಸಲಾಗುವುದು ಎಂದು ಅಧಿಕಾರಿಗಳು ಭರವಸೆ ನೀಡಿದರು.

''ಕುಡಿಯುವ ನೀರು ಪೂರೈಕೆಗೆ ಅಗತ್ಯವಿರುವಷ್ಟು ಅನುದಾನ ಈಗಾಗಲೇ ನೀಡಲಾಗಿದೆ. ಆದರೂ ಜನರಿಗೆ ಸಮರ್ಪಕ ನೀರು ದೊರೆಯದಿರುವುದು ಸರಿಯಲ್ಲ. ಅಮೃತ್-2 ಯೋಜನೆಯ ನೀರು ಸಂಸ್ಕರಣಾ ಘಟಕ (ಡಬ್ಲ್ಯೂಟಿಪಿ), ಹೊಸ ಮೋಟರ್ ಅಳವಡಿಕೆ, ವಿದ್ಯುತ್ ಸಂಪರ್ಕ ಹಾಗೂ ಪೈಪ್‌ಲೈನ್ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಕುಡಿಯುವ ನೀರಿನ ವಿಷಯದಲ್ಲಿ ಯಾವುದೇ ನಿರ್ಲಕ್ಷ್ಯ ಸಹಿಸುವುದಿಲ್ಲ. ಪ್ರತಿವಾರ ನೀರು ಸರಬರಾಜಿನ ಸ್ಥಿತಿಗತಿ ಹಾಗೂ ಎದುರಾಗುತ್ತಿರುವ ಸಮಸ್ಯೆಗಳ ಕುರಿತು ಮಾಹಿತಿ ನೀಡಬೇಕು'' ಎಂದು ಬೋಸರಾಜು ಅಧಿಕಾರಿಗಳಿಗೆ ಸೂಚಿಸಿದರು.

ನಿಗದಿತ ಅವಧಿಯೊಳಗೆ ಎಲ್ಲ ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಪಟ್ಟಣದ ಜನತೆಗೆ ಸಮರ್ಪಕ ಕುಡಿಯುವ ನೀರು ಪೂರೈಸಬೇಕು. ಕಾಮಗಾರಿ ಪೂರ್ಣಗೊಳಿಸುವಲ್ಲಿ ಗುತ್ತಿಗೆದಾರರು ನಿರ್ಲಕ್ಷ್ಯ ವಹಿಸಿದರೆ ಸರ್ಕಾರದ ಗಮನಕ್ಕೆ ತಂದು ಕಠಿಣ ಕ್ರಮಕ್ಕೆ ಶಿಫಾರಸು ಮಾಡಲಾಗುವುದು ಎಂದು ಎನ್.ಎಸ್. ಬೋಸರಾಜು ಹಾಗೂ ಶಾಸಕ ಹಂಪಯ್ಯ ನಾಯಕ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಅಮೃತ್-2 ಯೋಜನೆಯ ಕಾರ್ಯನಿರ್ವಾಹಕ ಅಭಿಯಂತರ ಗುರುರಾಜ್, ಕೆಡಬ್ಲ್ಯುಎಸ್ ಎಸ್‌ಬಿ ಅಧಿಕಾರಿ ಚೌಹಾಣ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಅಬ್ದುಲ್ ಗಫೂರ್ ಸಾಬ್, ಕಾಂಗ್ರೆಸ್ ಮುಖಂಡರಾದ ಶರಣಯ್ಯ ನಾಯಕ, ಸುಭಾಷ್ ನಾಯಕ, ಬಾಲಸ್ವಾಮಿ ಕೊಡ್ಲಿ, ಖಾಲಿದ್ ಗುರು ಸಾಹೇಬ್, ರಾಮಕೃಷ್ಣ, ಸುಖಮುನಿ, ದೇವೇಂದ್ರಪ್ಪ ಸೇರಿದಂತೆ ತಾಂತ್ರಿಕ ವಿಭಾಗದ ಅಧಿಕಾರಿಗಳು, ಪುರಸಭೆ ಸಿಬ್ಬಂದಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ನಮೋಶಿ ನಾಮಪತ್ರ ಸಲ್ಲಿಕೆಗೆ ಬಿಜೆಪಿ-ಜೆಡಿಎಸ್ ಮುಖಂಡರು ಭಾಗಿ: ವೀರಣ್ಣಗೌಡ ಲೆಕ್ಕಿಹಾಳ

ಲೆಕ್ಕಿಹಾಳ ಹೇಳಿದರು.

ಜೆಡಿಎಸ್ ಜಿಲ್ಲಾಧ್ಯಕ್ಷ ವಿರೂಪಾಕ್ಷಿ ಮಾತನಾಡಿ, ಈಶಾನ್ಯ ಭಾಗದ ನಾಲ್ಕು ಕ್ಷೇತ್ರಗಳ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳ ಗೆಲುವಿಗಾಗಿ ಜೆಡಿಎಸ್ ಶಾಸಕರು, ಮುಖಂಡರು ಮತ್ತು ಕಾರ್ಯಕರ್ತರು ಪೂರ್ಣ ಪ್ರಮಾಣದಲ್ಲಿ ಕೈಜೋಡಿಸಲಿದ್ದಾರೆ. ಜೆಡಿಎಸ್ ರಾಜ್ಯ ನಾಯಕತ್ವ ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ನಿರ್ದೇಶನದಂತೆ ಯಾವುದೇ ಗೊಂದಲಕ್ಕೆ ಅವಕಾಶ ನೀಡದೆ ಮೈತ್ರಿ ಅಭ್ಯರ್ಥಿಗಳ ಪರ ಸಂಘಟಿತವಾಗಿ ಕೆಲಸ ಮಾಡಲಾಗುವುದು ಎಂದರು.

ಇದೇ ವೇಳೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ತಾವು ಆಕಾಂಕ್ಷಿಯಾಗಿರುವುದಾಗಿ ವಿರೂಪಾಕ್ಷಿ ತಿಳಿಸಿದರು.

ಈ ಸಂದರ್ಭದಲ್ಲಿ ಮಾಂತೇಶ ಅತನೂರ್, ರವೀಂದ್ರ ಜಾಲ್ದಾರ್, ರಾಮಕೃಷ್ಣ, ಜಂಬಣ್ಣ ನೀಲಗಲ್, ಶಿವಶಂಕರ್, ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ನೂತನ ಪದಾಧಿಕಾರಿಗಳ ಆಯ್ಕೆ ನಿಯಮಾನುಸಾರ: ಜಿ. ಶಿವಮೂರ್ತಿ

ಅಧಿಕಾರಾವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಜಂಬಣ್ಣ ಅವರೇ ಸೆ.27ರಂದು ಸಮಾಜದ ಸಮುದಾಯ ಭವನದಲ್ಲಿ ಸರ್ವಸದಸ್ಯರ ಸಭೆ ಕರೆದಿದ್ದರು. ಈ ಸಭೆಯ ಕುರಿತು ಪತ್ರಿಕೆಯಲ್ಲಿ ನೋಟಿಸ್ ಕೂಡ ಪ್ರಕಟವಾಗಿತ್ತು. ನೂತನ ಜಿಲ್ಲಾಧ್ಯಕ್ಷರ ಆಯ್ಕೆಯ ಕುರಿತು ಸಮಾಜ ತೀರ್ಮಾನ ಕೈಗೊಳ್ಳಲಿದೆ ಎಂಬುದನ್ನು ಅವರೇ ತಿಳಿಸಿದ್ದರು ಎಂದರು.

ಇದರ ಮುಂದುವರಿದ ಭಾಗವಾಗಿ ಸೆ.29ರಂದು ಮಡಿವಾಳ ಸಮಾಜದ ಸಮುದಾಯ ಭವನದಲ್ಲಿ ಅನೇಕ ಹಿರಿಯ ಮುಖಂಡರು ಹಾಗೂ ಸದಸ್ಯರ ಸಮ್ಮುಖದಲ್ಲಿ ಸಭೆ ನಡೆಸಿ, ಸರ್ವಾನುಮತದಿಂದ ಯು. ಆಂಜನೇಯ್ಯ ಅವರನ್ನು ನೂತನ ಜಿಲ್ಲಾಧ್ಯಕ್ಷರನ್ನಾಗಿ ಹಾಗೂ ಬಿ. ವಿರೂಪಾಕ್ಷ ಅವರನ್ನು ಗೌರವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಈ ಆಯ್ಕೆಯಲ್ಲಿ ಯಾವುದೇ ಒತ್ತಡ ಅಥವಾ ಸರ್ವಾಧಿಕಾರಿ ಧೋರಣೆ ಅನುಸರಿಸಿಲ್ಲ ಎಂದು ಸ್ಪಷ್ಟಪಡಿಸಿದರು.

ಸಮಾಜದಲ್ಲಿ ಎಲ್ಲರಿಗೂ ಅವಕಾಶ ಮತ್ತು ಅಧಿಕಾರ ದೊರೆಯಬೇಕು ಎಂಬುದು ಹಿರಿಯರ ಆಶಯವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಅಧ್ಯಕ್ಷರಾಗುವ ಅವಕಾಶ ಇರಬೇಕು. ಇಲ್ಲಿ ವ್ಯಕ್ತಿಗಿಂತ ಸಮಾಜವೇ ದೊಡ್ಡದು ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕು ಎಂದು ಹೇಳಿದರು.

ಜಂಬಣ್ಣ ಯಕ್ಲಾಸಪೂರ ಅವರು ತಮ್ಮ ಮೂರು ವರ್ಷದ ಅಧ್ಯಕ್ಷೀಯ ಅವಧಿಯಲ್ಲಿ ಎಷ್ಟು ಬಾರಿ ಸಾಮಾನ್ಯ ಸಭೆ ಕರೆದಿದ್ದಾರೆ, ಸಮುದಾಯ ಭವನಕ್ಕೆ ಎಷ್ಟು ಬಾರಿ ಭೇಟಿ ನೀಡಿ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದ್ದಾರೆ ಹಾಗೂ ಸಮಾಜದ ಜನರ ಸಮಸ್ಯೆಗಳಿಗೆ ಎಷ್ಟರ ಮಟ್ಟಿಗೆ ಸ್ಪಂದಿಸಿದ್ದಾರೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು. ಸಮಾಜದ ಅಭಿವೃದ್ಧಿಗಾಗಿ ಜನಪ್ರತಿನಿಧಿಗಳಿಂದ ದೊರೆತ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದು ಅಧ್ಯಕ್ಷ ಸ್ಥಾನದಲ್ಲಿರುವ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಶಿವಮೂರ್ತಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಟಿ. ಮಲ್ಲೇಶ್, ನರಸಪ್ಪ ವೈ., ಯು. ಆಂಜನೇಯ್ಯ, ಬಿ. ವಿರೂಪಾಕ್ಷ, ಜಿ. ಸುಗಪ್ಪ, ಜಿ. ವೆಂಕಟೇಶ್, ಇ. ಚಂದಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಅಮೀನಗಡ, ಕೋಟೆಕಲ್‌ನಲ್ಲಿ ಬರ ವೀಕ್ಷಿಸಿದ ಕೇಂದ್ರ ತಂಡ; ರೈತರ ಅಳಲು ಆಲಿಕೆ



ಕವಿತಾಳ: ಮಸ್ಕಿ ತಾಲೂಕಿನಲ್ಲಿ ಉಂಟಾಗಿರುವ ತೀವ್ರ ಬರ ಪರಿಸ್ಥಿತಿ ಹಾಗೂ ಬೆಳೆ ಹಾನಿಯ ವಾಸ್ತವ ಸ್ಥಿತಿಯನ್ನು ಅಧ್ಯಯನ ಮಾಡಲು ಆಗಮಿಸಿರುವ ಕೇಂದ್ರ ಸರ್ಕಾರದ ಉನ್ನತ ಮಟ್ಟದ ಅಧ್ಯಯನ ತಂಡವು ಅಮೀನಗಡ ಮತ್ತು ಕೋಟೆಕಲ್ ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಮಳೆಯ ಕೊರತೆಯಿಂದ ಒಣಗಿ ಕಮರಿರುವ ವಿವಿಧ ಬೆಳೆಗಳನ್ನು ತಂಡದ ಅಧಿಕಾರಿಗಳು ಖುದ್ದಾಗಿ ವೀಕ್ಷಿಸಿ, ಹಾನಿಯ ಪ್ರಮಾಣದ ಕುರಿತು ಸ್ಥಳೀಯ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಹೊಲಗಳಿಗೆ ಭೇಟಿ ನೀಡಿದ ತಂಡವು ಬೆಳೆಗಳ ಸ್ಥಿತಿಯನ್ನು ಪರಿಶೀಲಿಸುವುದರ ಜೊತೆಗೆ ರೈತರೊಂದಿಗೆ ನೇರವಾಗಿ ಸಮಾಲೋಚನೆ ನಡೆಸಿತು.

ಮಳೆ ಕೈಕೊಟ್ಟ ಪರಿಣಾಮ ಎದುರಿಸಿರುವ ಬೆಳೆ ನಷ್ಟ, ಬಿತ್ತನೆಗಾಗಿ ಮಾಡಿರುವ ಖರ್ಚು, ಕೃಷಿ ಸಾಲ ಹಾಗೂ ಪ್ರಸ್ತುತ ಎದುರಿಸುತ್ತಿರುವ ಆರ್ಥಿಕ ಸಂಕಷ್ಟಗಳ ಕುರಿತು ರೈತರು ಕೇಂದ್ರ ತಂಡದ ಮುಂದೆ ತಮ್ಮ ಅಳಲು ತೋಡಿಕೊಂಡರು. ಬರ ಪರಿಸ್ಥಿತಿಯಿಂದ ಕೃಷಿ ಚಟುವಟಿಕೆಗಳ ಮೇಲೆ ಉಂಟಾಗಿರುವ ಪರಿಣಾಮವನ್ನೂ ಅಧಿಕಾರಿಗಳಿಗೆ ವಿವರಿಸಿದರು.

ರೈತರಿಂದ ಮಾಹಿತಿ ಪಡೆದ ತಂಡದ ಸದಸ್ಯರು, ಬರ ಪರಿಸ್ಥಿತಿ ಮತ್ತು ಬೆಳೆ ಹಾನಿಯ ವಾಸ್ತವ ಸ್ಥಿತಿಯನ್ನು ಸಮಗ್ರವಾಗಿ ಪರಿಶೀಲಿಸಿ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೇಂದ್ರ ತಂಡದ ಅಧಿಕಾರಿಗಳಾದ ಡಾ. ಮಾನ್ ಸಿಂಗ್, ಪಾರ್ಥ ಪಾಲ್, ರಾಕೇಶ್ ಕುಮಾರ್, ರಾಯಚೂರು ಜಿಲ್ಲಾಧಿಕಾರಿ ಪೂವಿತಾ ಎಸ್., ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ್ ಕುಮಾರ್ ಕಾಂದೂ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸ್ಥಳೀಯ ರೈತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಯುವ ಸಂಸತ್‌ನಿಂದ ಶಾಸಕಾಂಗದ ಕಾರ್ಯನಿರ್ವಹಣೆ ಕುರಿತು ಪ್ರಾಯೋಗಿಕ ಜ್ಞಾನ: ಸತ್ಯಮ್ಮ



ಲಿಂಗಸೂಗೂರು: ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡುವುದರ ಜೊತೆಗೆ ಅದರ ಪ್ರಮುಖ ಅಂಗಗಳಲ್ಲಿ ಒಂದಾದ ಶಾಸಕಾಂಗದ ಕಾರ್ಯನಿರ್ವಹಣೆ ಕುರಿತು ಪ್ರಾಯೋಗಿಕ ಜ್ಞಾನ ಮೂಡಿಸುವಲ್ಲಿ ಯುವ ಸಂಸತ್ ಕಾರ್ಯಕ್ರಮ ಮಹತ್ವದ ಪಾತ್ರ ವಹಿಸುತ್ತದೆ ಎಂದು ತಹಸೀಲ್ದಾರ್ ಸತ್ಯಮ್ಮ ಹೇಳಿದರು.

ಪಟ್ಟಣದ ಶ್ರೀ ವಿಜಯಮಹಾಂತೇಶ್ವರ ಶಾಖಾ ಮಠದ ಆವರಣದಲ್ಲಿ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ತಾಲೂಕು ಮಟ್ಟದ ಯುವ ಸಂಸತ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯುವಜನತೆಯಲ್ಲಿ ಹೆಚ್ಚುತ್ತಿರುವ ಮಾದಕ ವ್ಯಸನದಅಪಾಯ,ಪ್ರಸ್ತುತರೈತರುಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಯುವ ಸಂಸತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿಗಳು ಶಾಸಕಾಂಗದ ಕಾರ್ಯಚಟುವಟಿಕೆಗಳು, ಜನಪ್ರತಿನಿಧಿಗಳ ಜವಾಬ್ದಾರಿ ಹಾಗೂ ಆಡಳಿತ ವ್ಯವಸ್ಥೆಯ ಕುರಿತು ಸಮಗ್ರ ಮಾಹಿತಿ ಪಡೆದುಕೊಳ್ಳಬೇಕು ಎಂದರು.

ಯುವ ಪೀಳಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯ ಮಹತ್ವವನ್ನು ಅರಿತುಕೊಂಡು ಭವಿಷ್ಯದಲ್ಲಿ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಹಾಗೂ ಸಮಾಜದ ಸಮಸ್ಯೆಗಳ ಪರಿಹಾರಕ್ಕೆ ಕೊಡುಗೆ ನೀಡುವ ಮನೋಭಾವ ಬೆಳೆಸಿಕೊಳ್ಳಬೇಕು. ತಾಲೂಕು ಮಟ್ಟದ ಯುವ ಸಂಸತ್‌ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡುವ ವಿದ್ಯಾರ್ಥಿಗಳನ್ನು ಮುಂದಿನ ಜಿಲ್ಲಾ ಮಟ್ಟದ ಸ್ಪರ್ಧೆಗೆ ಆಯ್ಕೆ ಮಾಡಲಾಗುವುದು ಎಂದು ತಿಳಿಸಿದರು.

ಯುವ ಸಂಸತ್‌ನಲ್ಲಿ ನೈಜ ಶಾಸಕಾಂಗ ಅಧಿವೇಶನದ ಮಾದರಿಯಲ್ಲಿ ಸಭಾಧ್ಯಕ್ಷ, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ, ಸಚಿವರು ಹಾಗೂ ಶಾಸಕರ ಪಾತ್ರಗಳನ್ನು ವಿದ್ಯಾರ್ಥಿಗಳು ನಿರ್ವಹಿಸಿದರು. ಆಡಳಿತ ಮತ್ತು ವಿರೋಧ ಪಕ್ಷಗಳ ಪಾತ್ರ ವಹಿಸಿದ ವಿದ್ಯಾರ್ಥಿಗಳು ವಿವಿಧ ಸಾರ್ವಜನಿಕ ಸಮಸ್ಯೆಗಳ ಕುರಿತು ಪ್ರಶ್ನೋತ್ತರ, ಪರ-ವಿರೋಧ ಚರ್ಚೆ ನಡೆಸುವ ಮೂಲಕ ಶಾಸಕಾಂಗ ಕಲಾಪದ ಪ್ರಾತ್ಯಕ್ಷಿಕೆ ನೀಡಿದರು.

ಕಾರ್ಯಕ್ರಮದಲ್ಲಿ ಸಿವಿಲ್ ಪ್ರಧಾನ ನ್ಯಾಯಾಧೀಶ ಕೆ. ಅಂಬಣ್ಣ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಸಂವಿಧಾನದ ಮೌಲ್ಯಗಳ ಕುರಿತು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ್, ಸಮಾಜ ಕಲ್ಯಾಣ ಅಧಿಕಾರಿ ರವೀಂದ್ರ ಉಪ್ಪಾರ, ಕ್ಷೇತ್ರ ಶಿಕ್ಷಣಾಧಿಕಾರಿ ಸುಜಾತ ಹುನೂರು, ಶಿಶು ಅಭಿವೃದ್ಧಿ ಯೋಜನಾಧಿಕಾರಿ ನಾಗರತ್ನ, ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ವೆಂಕಟನಾರಾಯಣ, ಪಿ.ಐ. ಹೊಸಕೇರಪ್ಪ, ಎನ್. ನಟರಾಜ, ಮುರಳೀಧರ ರಾವು, ಭೂಪನಗೌಡ, ಚಂದ್ರಶೇಖರ, ವೆಂಕಟೇಶ್, ಹನುಮಂತಪ್ಪ, ಹಾಜಿಬಾಬು ಕಲ್ಯಾಣಿ ಸೇರಿದಂತೆ ವಿವಿಧ ಶಾಲೆಗಳ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ನಾರಾಯಣಪುರ 9ಎ ಕಾಲುವೆ ಕಾಮಗಾರಿ ತ್ವರಿತ ಪೂರ್ಣಗೊಳಿಸಲು ಬೋಸರಾಜು, ಹಂಪಯ್ಯ ನಾಯಕ ತಾಕೀತು



ಕವಿತಾಳ: ರೈತರ ಜಮೀನುಗಳಿಗೆ ಸಮರ್ಪಕವಾಗಿ ನೀರು ತಲುಪಿಸುವ ಉದ್ದೇಶದಿಂದ ನಾರಾಯಣಪುರ ಬಲದಂಡೆ ನಾಲೆಯ 9ಎ ಕಾಲುವೆ ಹಾಗೂ ಉಪಕಾಲುವೆಗಳ ಬಾಕಿ ಕಾಮಗಾರಿಗಳನ್ನು ಯಾವುದೇ ವಿಳಂಬವಿಲ್ಲದೆ ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಎನ್.ಎಸ್. ಬೋಸರಾಜು ಹಾಗೂ ಮಾನ್ವಿ ಶಾಸಕ ಜಿ. ಹಂಪಯ್ಯ ನಾಯಕ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪಟ್ಟಣದ ಸಮೀಪದ 9ಎ ಕಾಲುವೆ ಪ್ರದೇಶಕ್ಕೆ ಭೇಟಿ ನೀಡಿ ಕಾಮಗಾರಿಗಳನ್ನು ಪರಿಶೀಲಿಸಿದ ಅವರು, ದೀರ್ಘಕಾಲದಿಂದ ಕಾಮಗಾರಿ ಅಪೂರ್ಣವಾಗಿರುವುದರಿಂದ ರೈತರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು. ಇದೇ ವೇಳೆ ಸ್ಥಳದಲ್ಲಿದ್ದ ರೈತರ ಅಹವಾಲುಗಳನ್ನು ಆಲಿಸಿದರು.

ಈಗಾಗಲೇ ನಿರ್ಮಾಣಗೊಂಡಿರುವ ಕಾಲುವೆಯ ಹಲವು ಭಾಗಗಳಲ್ಲಿ ಹೂಳು ತುಂಬಿಕೊಂಡಿದ್ದು, ಗಿಡಗಂಟಿಗಳು ಬೆಳೆದಿರುವುದರಿಂದ ನೀರಿನ ಸರಾಗ ಹರಿವಿಗೆ ಅಡ್ಡಿಯಾಗುತ್ತಿದೆ. ಪರಿಣಾಮ ಕಾಲುವೆಯ ಕೊನೆಯ ಭಾಗದ ಜಮೀನುಗಳಿಗೆ ಸಮರ್ಪಕವಾಗಿ ನೀರು ತಲುಪುತ್ತಿಲ್ಲ ಎಂದು ರೈತರು ಅಳಲು ತೋಡಿಕೊಂಡರು.

ರೈತರ ಸಮಸ್ಯೆಗಳಿಗೆ ಸ್ಪಂದಿಸಿದ ಎನ್. ಎಸ್. ಬೋಸರಾಜು ಹಾಗೂ ಶಾಸಕ ಹಂಪಯ್ಯ ನಾಯಕ, ಒಂದು ವಾರದೊಳಗೆ ಕಾಲುವೆಯಲ್ಲಿ ತುಂಬಿರುವ ಹೂಳು ಹಾಗೂ ಬೆಳೆದಿರುವ ಗಿಡಗಂಟಿಗಳನ್ನು ಸಂಪೂರ್ಣವಾಗಿ ತೆರವುಗೊಳಿಸಿ ನೀರು ಸರಾಗವಾಗಿ ಹರಿಯುವಂತೆ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಬಾಕಿ ಉಳಿದಿರುವ ಕಾಲುವೆ ಮತ್ತು ಉಪಕಾಲುವೆಗಳ ಕಾಮಗಾರಿಗಳನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು. ಕಾಲುವೆಗೆ ನೀರು ಹರಿಸಲು ಅಗತ್ಯವಿರುವ ತಾಂತ್ರಿಕ ಹಾಗೂ ಕಾನೂನಾತ್ಮಕ ಪ್ರಕ್ರಿಯೆಗಳನ್ನು ವಿಳಂಬ ಮಾಡದೆ ಕೈಗೊಳ್ಳಬೇಕು. ಕಾಮಗಾರಿಯಲ್ಲಿ ನಿರ್ಲಕ್ಷ್ಯ ಕಂಡುಬಂದರೆ ಸಂಬಂಧಪಟ್ಟವರ ವಿರುದ್ಧ ಕ್ರಮಕ್ಕೆ ಮುಂದಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕಾಲುವೆ ನಿರ್ಮಾಣದ ಉದ್ದೇಶವೇ ರೈತರ ಜಮೀನುಗಳಿಗೆ ನೀರು ಒದಗಿಸುವುದಾಗಿದ್ದು, ಕಾಮಗಾರಿ ಅಪೂರ್ಣವಾಗಿರುವ ಕಾರಣ ರೈತರು ನೀರಿನಿಂದ ವಂಚಿತರಾಗುವ ಪರಿಸ್ಥಿತಿ ಉಂಟಾಗಬಾರದು. ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ ರೈತರಿಗೆ ಅನುಕೂಲ ಕಲ್ಪಿಸಬೇಕು ಎಂದು ಸೂಚಿಸಿದರು.

ಈ ಸಂದರ್ಭದಲ್ಲಿ ಕಿರಲಿಂಗಪ್ಪ, ಶರಣಪ್ಪ ಗುಡದಿನ್ನಿ, ಶೇಖರಪ್ಪ ಸಾಹುಕಾರ್ ಹಟ್ಟಿ, ವೀರೇಶ್ ಬಳಿಗಾರ, ಶಿವಣ್ಣ ವಕೀಲ, ಕರಿಯಪ್ಪ ತೋಳದು, ಅಯ್ಯಪ್ಪ ನಿಲಗಲ್, ಮೌನೇಶ್ ಹಿರೇಕುರುಬರು, ನವೀನ್ ಕುಮಾರ್ ಸೇರಿದಂತೆ ನೀರಾವರಿ ಇಲಾಖೆಯ ಮುಖ್ಯ ಕಾರ್ಯನಿರ್ವಾಹಕ ಇಂಜಿನಿಯರ್, ಸಹಾಯಕ ಇಂಜಿನಿಯರ್‌ಗಳು, ಸ್ಥಳೀಯ ಮುಖಂಡರು ಹಾಗೂ ವಿವಿಧ ಗ್ರಾಮಗಳ ರೈತರು ಉಪಸ್ಥಿತರಿದ್ದರು.

# ಸರಳ ಸಜ್ಜನಿಕೆಯ ವ್ಯಕ್ತಿತ್ವ....



"ಕೆಲವರು ತಮ್ಮ ಸಾಧನೆಯಿಂದ ಗುರುತಿಸಿಕೊಳ್ಳುತ್ತಾರೆ; ಇನ್ನು ಕೆಲವರು ತಮ್ಮ ವ್ಯಕ್ತಿತ್ವದಿಂದ ಗೌರವಿಸಲ್ಪಡುತ್ತಾರೆ.. ಮತ್ತು ತಮ್ಮ ಒಳ್ಳೆಯತನದಿಂದ ಹೃದಯಗಳಲ್ಲಿ ಶಾಶ್ವತವಾಗಿ ನೆಲೆಸುತ್ತಾರೆ.''

ಜೀವನವೆಂಬುದು ಸುಖದ ಹೂವಿನ ಹಾಸಿಗೆಯಲ್ಲ; ಅದು ನೋವು, ನಲಿವು, ಸೋಲು, ಗೆಲುವು, ಸವಾಲು, ಸಂಘರ್ಷಗಳನ್ನೊಳಗೊಂಡ ನಿರಂತರ ಪಯಣ. ಈ ಪಯಣದಲ್ಲಿ ಕೆಲವರು ಪರಿಸ್ಥಿತಿಗಳಿಗೆ ಶರಣಾಗುತ್ತಾರೆ; ಇನ್ನೂ ಕೆಲವರು ಪರಿಸ್ಥಿತಿಗಳನ್ನೇ ಮೆಟ್ಟಿಲುಗಳನ್ನಾಗಿಸಿಕೊಂಡು ತಮ್ಮ ಬದುಕನ್ನು ತಾವೇ ರೂಪಿಸಿಕೊಳ್ಳುತ್ತಾರೆ. ಕಷ್ಟಗಳ ಕಲ್ಲುಮುಳ್ಳುಗಳನ್ನು ದಾಟಿ, ಪರಿಶ್ರಮದ ಬೆವರ ಹನಿಗಳಿಂದ ಬದುಕಿನ ನೆಲವನ್ನು ಹಸನು ಮಾಡಿಕೊಂಡು, ತಮ್ಮದೇ ಆದ ಗುರುತನ್ನು ನಿರ್ಮಿಸಿಕೊಳ್ಳುವವರು ಸಮಾಜಕ್ಕೆ ಕೇವಲ ವ್ಯಕ್ತಿಗಳಾಗಿ ಉಳಿಯುವುದಿಲ್ಲ; ಅವರು ಸ್ಫೂರ್ತಿಯ ಸೆಲೆಗಳಾಗುತ್ತಾರೆ. ಅಂತಹ ವ್ಯಕ್ತಿಗಳಲ್ಲಿ ಒಬ್ಬರು ಕೆ. ಶಾಂತಪ್ಪ ನವರು..

ಒಬ್ಬ ವ್ಯಕ್ತಿಯನ್ನು ಪರಿಚಯಿಸುವಾಗ ಅವರ ಹೆಸರು, ಹುದ್ದೆ, ಅಧಿಕಾರ, ಸಾಧನೆಗಳನ್ನು ಉಲ್ಲೇಖಿಸುವುದು ಸುಲಭ. ಆದರೆ ಅವರ ಹೃದಯದ ವಿಶಾಲತೆ, ವ್ಯಕ್ತಿತ್ವದ ಆಳ, ಬದುಕಿನ ಮೌಲ್ಯಗಳು ಮತ್ತು ಇನ್ನೊಬ್ಬರ ಬದುಕಿನಲ್ಲಿ ಅವರು ಮೂಡಿಸಿದ ಭರವಸೆಯನ್ನು ಅಕ್ಷರಗಳಲ್ಲಿ ಕಟ್ಟಿಕೊಡುವುದು ಅಷ್ಟು ಸುಲಭವಲ್ಲ. ಏಕೆಂದರೆ ವ್ಯಕ್ತಿಯ ನಿಜವಾದ ಎತ್ತರವನ್ನು ಅಳೆಯಲು ಅಳತೆಪಟ್ಟಿಗಳಿಲ್ಲ; ಅದನ್ನು ಅಳೆಯಬೇಕಾದರೆ ಅವರಿಂದ ಪ್ರೀತಿಸಲ್ಪಟ್ಟ ಹೃದಯಗಳನ್ನು, ಅವರಿಂದ ಪ್ರೋತ್ಸಾಹ ಪಡೆದ ಕನಸುಗಳನ್ನು ಮತ್ತು ಅವರ ಒಳ್ಳೆಯತನದಿಂದ ಬೆಳಕು ಕಂಡ ಬದುಕುಗಳನ್ನು ನೋಡಬೇಕು.

ಕೆ. ಶಾಂತಪ್ಪ ಅವರ ಕುರಿತು ಬರೆಯಲು ಕುಳಿತಾಗ ಮನಸ್ಸಿನಲ್ಲಿ ಮೂಡುವ ಮೊದಲ ಭಾವನೆ ಇದೇರಾಜಕೀಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ವ್ಯಕ್ತಿಯೊಬ್ಬರು ತಮ್ಮ ಸರಳತೆ, ಸೌಮ್ಯತೆ ಮತ್ತು ನಿರಹಂಕಾರದ ಮೂಲಕ ಮನುಷ್ಯತ್ವದ ಘನತೆಯನ್ನು ಎತ್ತಿಹಿಡಿಯಬಲ್ಲರು ಎಂಬುದು. ಕಷ್ಟದ ಹಾದಿಯಿಂದ ಆತ್ಮವಿಶ್ವಾಸದ ಶಿಖರದವರೆಗೆ ಯಾವುದೇ ವ್ಯಕ್ತಿಯ ಯಶಸ್ಸಿನ ಹಿಂದೆ ಒಂದು ಕಥೆಯಿರುತ್ತದೆ. ಆ ಕಥೆಯಲ್ಲಿ ಹೊರಜಗತ್ತಿಗೆ ಕಾಣಿಸುವುದು ಸಾಧನೆಯ ಶಿಖರವಾದರೆ, ಕಾಣಿಸದಿರುವುದು ಆ ಶಿಖರವನ್ನು ತಲುಪಲು ಅವರು ಕ್ರಮಿಸಿದ ಕಠಿಣ ಹಾದಿ. ಯಶಸ್ಸಿನ ಹೊಳಪನ್ನು ಎಲ್ಲರೂ ನೋಡುತ್ತಾರೆ; ಆದರೆ ಅದರ ಹಿಂದೆ ಮೌನವಾಗಿ ಹರಿದ ಬೆವರ ಹನಿಗಳು, ಎದುರಿಸಿದ ಸವಾಲುಗಳು, ಅನುಭವಿಸಿದ ಸಂಕಷ್ಟಗಳು ಮತ್ತು ಮನಸ್ಸಿನೊಳಗೆ ಹೋರಾಡಿದ ಸಂಘರ್ಷಗಳು ಕೆಲವರಿಗೆ ಮಾತ್ರ ಅರ್ಥವಾಗುತ್ತವೆ. ಕೆ. ಶಾಂತಪ್ಪ ಅವರ ಬದುಕಿನ ಪಯಣವನ್ನು ನೆನಪಿಸಿಕೊಳ್ಳುವಾಗ, ಕಷ್ಟಗಳ ನಡುವೆಯೂ ಮುನ್ನಡೆಯುವ ಛಲ ಮತ್ತು ಬದುಕಿನಲ್ಲಿ ತಮ್ಮದೇ ಆದ ಸ್ಥಾನವನ್ನು ರೂಪಿಸಿಕೊಳ್ಳುವ ಪ್ರಯತ್ನದ ಮಹತ್ವವನ್ನು ನಾವು ಅರಿಯಬಹುದು. ಕಷ್ಟದಿಂದ ಮೇಲೆದ್ದು ನಿಲ್ಲುವುದು ಎಂದರೆ ಕೇವಲ ಆರ್ಥಿಕವಾಗಿ ಅಥವಾ ಸಾಮಾಜಿಕವಾಗಿ ಬೆಳೆದು ನಿಲ್ಲುವುದಲ್ಲ; ಪ್ರತಿಕೂಲ ಪರಿಸ್ಥಿತಿಗಳ ನಡುವೆಯೂ ಆತ್ಮವಿಶ್ವಾಸವನ್ನು ಕಳೆದುಕೊಳ್ಳದೆ, ಬದುಕಿನ ಮೌಲ್ಯಗಳನ್ನು ಉಳಿಸಿಕೊಂಡು ಮುನ್ನಡೆಯುವುದಾಗಿದೆ.

"ಕಷ್ಟಗಳು ನಮ್ಮ ಹಾದಿಯನ್ನು ತಡೆಯಲು ಬರಬಹುದು; ಆದರೆ ನಮ್ಮ ಸಂಕಲ್ಪ ಗಟ್ಟಿಯಾಗಿದ್ದರೆ, ಅದೇ ಕಷ್ಟಗಳು ನಮ್ಮ ಯಶಸ್ಸಿನ ಮೆಟ್ಟಿಲುಗಳಾಗುತ್ತವೆ.'' ಜೀವನದಲ್ಲಿ ಅನುಕೂಲಕರ ಪರಿಸ್ಥಿತಿಗಳು ದೊರೆತಾಗ ಮುನ್ನಡೆಯುವುದು ಒಂದು ಸಂಗತಿ; ಪ್ರತಿಕೂಲ ಪರಿಸ್ಥಿತಿಗಳ ನಡುವೆಯೂ ಮುನ್ನಡೆಯುವುದು ಮತ್ತೊಂದು ಸಂಗತಿ. ಎರಡನೆಯ ಹಾದಿಯಲ್ಲಿ ಸಾಗುವವರಿಗೆ ತಾಳ್ಮೆ, ಪರಿಶ್ರಮ, ಆತ್ಮವಿಶ್ವಾಸ ಮತ್ತು ದೃಢಸಂಕಲ್ಪದ ಅಗತ್ಯವಿರುತ್ತದೆ. ಇಂತಹ ಹೋರಾಟದ ಹಾದಿ ಮನುಷ್ಯನಿಗೆ ಕೇವಲ ಅನುಭವವನ್ನಷ್ಟೇ ನೀಡುವುದಿಲ್ಲ; ಇತರರ ನೋವನ್ನು ಅರ್ಥಮಾಡಿಕೊಳ್ಳುವ ಹೃದಯವನ್ನೂ ನೀಡುತ್ತದೆ. ಕಷ್ಟವನ್ನು ಕಂಡ ಮನಸ್ಸಿಗೆ ಮತ್ತೊಬ್ಬರ ಕಷ್ಟದ ಅರಿವು ಹೆಚ್ಚು ಆಳವಾಗಿರುತ್ತದೆ. ಹೋರಾಟವನ್ನು ಅನುಭವಿಸಿದ ವ್ಯಕ್ತಿಗೆ ಮತ್ತೊಬ್ಬರ ಪ್ರಯತ್ನದ ಬೆಲೆ ತಿಳಿದಿರುತ್ತದೆ. ಬಹುಶಃ ಬದುಕಿನ ಇಂತಹ ಅನುಭವಗಳೇ ಒಬ್ಬ ವ್ಯಕ್ತಿಯಲ್ಲಿ ಸಹಾಯ ಮಾಡುವ ಮನೋಭಾವವನ್ನು, ಮೃದು ಮಾತುಗಳನ್ನು ಮತ್ತು ಪರರ ಬದುಕಿಗೆ ಸ್ಪಂದಿಸುವ ಗುಣವನ್ನು ಇನ್ನಷ್ಟು ಅರ್ಥಪೂರ್ಣವಾಗಿಸುತ್ತವೆ. ಕೆ. ಶಾಂತಪ್ಪ ಅವರ ವ್ಯಕ್ತಿತ್ವದಿಂದ ನಾವು ಗ್ರಹಿಸಬಹುದಾದ ಒಂದು ಮುಖ್ಯ ಸಂದೇಶವೆಂದರೆ, ಬೆಳೆಯುವುದು ಮುಖ್ಯ, ಆದರೆ ಬೆಳೆದ ನಂತರವೂ ಸೌಮ್ಯ ಗುಣವನ್ನು ಉಳಿಸಿಕೊಳ್ಳುವುದು ಅದಕ್ಕಿಂತಲೂ ಮುಖ್ಯ.

ರಾಜಕೀಯದ ನಡುವೆ ಅರಳಿದ ಸರಳತೆಯ ವ್ಯಕ್ತಿತ್ವ...

ರಾಜಕೀಯವೆಂಬುದು ಜನರೊಂದಿಗೆ ಬೆರೆತು, ಅವರ ಸಮಸ್ಯೆಗಳನ್ನು ಅರಿತು, ಸಾರ್ವಜನಿಕ ಬದುಕಿನಲ್ಲಿ ಜವಾಬ್ದಾರಿಯನ್ನು ನಿರ್ವಹಿಸಬೇಕಾದ ಕ್ಷೇತ್ರ. ಈ ಕ್ಷೇತ್ರದಲ್ಲಿ ಸ್ಥಾನಮಾನ ಮತ್ತು ಪ್ರಭಾವಕ್ಕೆ ಮಹತ್ವವಿರಬಹುದು. ಆದರೆ ಒಬ್ಬ ವ್ಯಕ್ತಿಯ ನಿಜವಾದ ವ್ಯಕ್ತಿತ್ವವನ್ನು ನಿರ್ಧರಿಸುವುದು ಅವರ ಹುದ್ದೆಯಲ್ಲ; ಆ ಹುದ್ದೆಯಲ್ಲಿದ್ದಾಗ ಅವರು ಇತರರನ್ನು ಹೇಗೆ ಕಾಣುತ್ತಾರೆ ಎಂಬುದಾಗಿದೆ. ಕೆ. ಶಾಂತಪ್ಪ ಅವರು ರಾಜಕೀಯ ವ್ಯಕ್ತಿಯಾಗಿದ್ದರೂ ಅವರಲ್ಲಿ ಕಾಣುವ ಸರಳತೆ, ಸೌಮ್ಯತೆ ಮತ್ತು ನಿರಹಂಕಾರದ ಗುಣಗಳು ವಿಶೇಷವಾಗಿ ಗಮನ ಸೆಳೆಯುತ್ತವೆ. ಅವರ ವ್ಯಕ್ತಿತ್ವದಲ್ಲಿ ಆಡಂಬರಕ್ಕಿಂತ ಆತ್ಮೀಯತೆ, ಅಹಂಭಾವಕ್ಕಿಂತ ವಿನಯ, ಕಠೋರತೆಯ ಬದಲು ಮೃದುತ್ವಕ್ಕೆ ಹೆಚ್ಚಿನ ಮೌಲ್ಯವಿರುವುದು ಅವರೊಂದಿಗೆ ಒಡನಾಡಿದಾಗ ಅನುಭವಕ್ಕೆ ಬರುವ ಸಂಗತಿ.

ಕೆಲವರು ಅಧಿಕಾರವನ್ನು ತಮ್ಮ ಸುತ್ತಲೂ ಗೋಡೆಯನ್ನಾಗಿ ಕಟ್ಟಿಕೊಳ್ಳುತ್ತಾರೆ; ಇನ್ನು ಕೆಲವರು ತಮ್ಮ ಸುತ್ತಲೂ ಆತ್ಮೀಯತೆಯ ಸೇತುವೆಯನ್ನು ನಿರ್ಮಿಸಿಕೊಳ್ಳುತ್ತಾರೆ.ಅಂತಹ ವ್ಯಕ್ತಿಗಳಲ್ಲಿ ಒಬ್ಬರು ಇವರಾಗಿದ್ದಾರೆ..

ಒಬ್ಬ ವ್ಯಕ್ತಿಯ ನಿಜವಾದ ಶ್ರೇಷ್ಠತೆ ತಾನು ಎಷ್ಟು ಜನರಿಗಿಂತ ಮೇಲಿದ್ದೇನೆ ಎಂಬುದರಲ್ಲಿ ಇಲ್ಲ; ತನ್ನ ಬಳಿಗೆ ಬಂದ ಎಷ್ಟು ಜನರಿಗೆ ಆತ್ಮೀಯತೆಯ ಅನುಭವ ನೀಡಿದ್ದೇನೆ ಎಂಬುದರಲ್ಲಿ ಮುಖ್ಯವಾಗುತ್ತದೆ..

ಈ ಮಾತು ಕೆ. ಶಾಂತಪ್ಪ ಅವರ ವ್ಯಕ್ತಿತ್ವವನ್ನು ನೆನಪಿಸುವಾಗ ಅರ್ಥಪೂರ್ಣವಾಗಿ ಅನಿಸುತ್ತದೆ. ರಾಜಕೀಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದರೂ ಸಾಮಾನ್ಯ ವ್ಯಕ್ತಿಯೊಂದಿಗೆ ಸರಳವಾಗಿ ಮಾತನಾಡುವುದು, ಎದುರಿನವರ ಮಾತಿಗೆ ಕಿವಿಗೊಡುವುದು, ಮೃದುವಾದ ನುಡಿಗಳ ಮೂಲಕ ಆತ್ಮೀಯತೆಯನ್ನು ಬೆಳೆಸುವುದು ಇವೆಲ್ಲವೂ ಅವರ ವ್ಯಕ್ತಿತ್ವದ ಸೊಬಗನ್ನು ಹೆಚ್ಚಿಸುತ್ತವೆ. ನಿಜವಾದ ದೊಡ್ಡತನವೆಂದರೆ ಎಲ್ಲರ ಗಮನವನ್ನು ತನ್ನತ್ತ ಸೆಳೆಯುವುದಲ್ಲ; ತನ್ನ ಸಂಪರ್ಕಕ್ಕೆ ಬಂದ ಪ್ರತಿಯೊಬ್ಬರಿಗೂ ತಾವು ಗೌರವಿಸಲ್ಪಟ್ಟಿದ್ದೇವೆ ಎಂಬ ಭಾವನೆಯನ್ನು ನೀಡುವುದು.

ಹುದ್ದೆಯ ಕಾರಣಕ್ಕೆ ದೊರೆಯುವ ಗೌರವಕ್ಕಿಂತ ಹೃದಯದಿಂದ ದೊರೆಯುವ ಗೌರವವೇ ದೀರ್ಘಕಾಲ ಉಳಿಯುತ್ತದೆ. ಏಕೆಂದರೆ ಹುದ್ದೆಗಳು ಬದಲಾಗಬಹುದು, ಅಧಿಕಾರಗಳು ಕೈತಪ್ಪಬಹುದು; ಆದರೆ ಒಳ್ಳೆಯತನದಿಂದ ಗಳಿಸಿದ ಪ್ರೀತಿ ಸುಲಭವಾಗಿ ಅಳಿಸಿಹೋಗುವುದಿಲ್ಲ.

"ಅತಿಥಿಗೆ ನೀಡುವ ಉಪಚಾರ ಕೈಯಿಂದ ನಡೆಯುತ್ತದೆ; ಆದರೆ ಅತಿಥಿಯ ಮನಸ್ಸಿನಲ್ಲಿ ಉಳಿಯುವ ಆತ್ಮೀಯತೆ ಹೃದಯದಿಂದ ಹುಟ್ಟುತ್ತದೆ.''

ಇವರ ಮತ್ತೊಂದು ವಿಶೇಷ ಎಂದರೆ ಇತರರಿಗೆ ಸಹಾಯ ಮಾಡುವ ಮನೋಭಾವ. ಒಬ್ಬ ವ್ಯಕ್ತಿ ತನ್ನ ಬದುಕಿನಲ್ಲಿ ಬೆಳೆಯುವುದರ ಜೊತೆಗೆ ಇತರರ ಬದುಕಿನಲ್ಲಿಯೂ ಬೆಳಕು ಮೂಡಿಸಲು ಪ್ರಯತ್ನಿಸಿದಾಗ ಆ ಬೆಳವಣಿಗೆಗೆ ವಿಶಿಷ್ಟ ಅರ್ಥ ಬರುತ್ತದೆ. ಅನೇಕರ ಸಾಹಿತ್ಯ ಪಯಣದ ಸಂದರ್ಭದಲ್ಲಿಯೂ ಅವರ ಸಹಕಾರವನ್ನು ನಾನು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತೇನೆ. ಬರಹಗಾರರಿಗೆ ಪ್ರೋತ್ಸಾಹಿಸುವುದು, ಪ್ರೇರಣೆ ನೀಡುವುದು ಇವರ ಸಹಜ ಗುಣದಲ್ಲಿ ಒಂದು.

ಹೋರಾಟದ ಹಾದಿಯಲ್ಲಿ ಸಾಗಿದವರು ನಮಗೆ ಪರಿಶ್ರಮದ ಮಹತ್ವವನ್ನು ಕಲಿಸುತ್ತಾರೆ. ಸರಳವಾಗಿ ಬದುಕುವವರು ವಿನಯದ ಬೆಲೆಯನ್ನು ತಿಳಿಸುತ್ತಾರೆ. ಪರೋಪಕಾರ ಮಾಡುವವರು ಮಾನವೀಯತೆಯ ಅರ್ಥವನ್ನು ಮನಗಾಣಿಸುತ್ತಾರೆ. ಕೆ. ಶಾಂತಪ್ಪ ಅವರ ವ್ಯಕ್ತಿತ್ವವನ್ನು ಈ ದೃಷ್ಟಿಯಿಂದ ಗಮನಿಸಿದಾಗ, ಅವರ ಬದುಕಿನ ವಿವಿಧ ಗುಣಗಳು ನಮಗೆ ಹಲವು ಸಂದೇಶಗಳನ್ನು ನೀಡುತ್ತವೆ. ಕಷ್ಟಗಳನ್ನು ಎದುರಿಸಿ ಮುನ್ನಡೆಯುವ ಛಲ, ರಾಜಕೀಯ ಕ್ಷೇತ್ರದಲ್ಲಿದ್ದರೂ ಸರಳತೆಯನ್ನು ಉಳಿಸಿಕೊಳ್ಳುವ ಗುಣ, ಎಲ್ಲರೊಂದಿಗೆ ಸೌಮ್ಯವಾಗಿ ಮಾತನಾಡುವ ಸಂಸ್ಕಾರ, ಮನೆಗೆ ಬಂದವರನ್ನು ಆತ್ಮೀಯವಾಗಿ ಕಾಣುವ ಮನೋಭಾವ ಮತ್ತು ಮತ್ತೊಬ್ಬರ ಕನಸಿಗೆ ಸಹಾಯ ಮಾಡುವ ಹೃದಯಇವೆಲ್ಲವೂ ಅನುಸರಿಸಬಹುದಾದ ಮೌಲ್ಯಗಳಾಗಿವೆ. "ಸ್ಫೂರ್ತಿ ನೀಡಲು ವೇದಿಕೆಯ ಮೇಲೆ ನಿಲ್ಲಬೇಕಿಲ್ಲ; ಕೆಲವೊಮ್ಮೆ ನಮ್ಮ ಬದುಕಿನ ರೀತಿಯೇ ಮತ್ತೊಬ್ಬರಿಗೆ ದಾರಿದೀಪವಾಗುತ್ತದೆ.'' ಒಬ್ಬ ವ್ಯಕ್ತಿ ತನ್ನ ಬದುಕಿನಲ್ಲಿ ಬೆಳೆದಿದ್ದಾನೆ ಎಂಬುದಕ್ಕಿಂತ, ಬೆಳೆದ ನಂತರವೂ ಇತರರ ಬೆಳವಣಿಗೆಯನ್ನು ಬಯಸುತ್ತಾನೆ ಎಂಬುದು ಹೆಚ್ಚು ಅರ್ಥಪೂರ್ಣ.

ತನ್ನ ಯಶಸ್ಸನ್ನು ಮಾತ್ರ ಸಂಭ್ರಮಿಸುವುದಕ್ಕಿಂತ ಮತ್ತೊಬ್ಬರ ಯಶಸ್ಸಿಗೂ ಸಂತೋಷಪಡುವ ಹೃದಯ ದೊಡ್ಡದು. ತನ್ನ ಕನಸುಗಳನ್ನು ನನಸಾಗಿಸಿಕೊಳ್ಳುವುದರ ಜೊತೆಗೆ ಇನ್ನೊಬ್ಬರ ಕನಸುಗಳಿಗೂ ಬೆಂಬಲ ನೀಡುವ ಮನಸ್ಸು ಸಮಾಜಕ್ಕೆ ಅಗತ್ಯ. ಶಾಂತಪ್ಪ ಅವರಂತಹ ವ್ಯಕ್ತಿಗಳಿಂದ ನಾವು ಪಡೆದುಕೊಳ್ಳಬೇಕಾದ ಸ್ಫೂರ್ತಿ ಕೇವಲ ಸಾಧನೆಯದ್ದಲ್ಲ; ಸಾಧನೆಯ ಜೊತೆಗೆ ಮಾನವೀಯತೆಯನ್ನು ಉಳಿಸಿಕೊಳ್ಳುವ ಗುಣದ್ದಾಗಿದೆ. ಬದುಕಿನಲ್ಲಿ ಎತ್ತರಕ್ಕೆ ಏರಿದಾಗ ನಮ್ಮ ಬೇರುಗಳನ್ನು ಮರೆಯಬಾರದು. ಜನರೊಂದಿಗೆ ಬೆರೆತಾಗ ನಮ್ಮ ಮಾತಿನಲ್ಲಿ ಗೌರವವಿರಬೇಕು. ಮತ್ತೊಬ್ಬರ ಸಹಾಯಕ್ಕೆ ನಿಂತಾಗ ಪ್ರತಿಫಲದ ನಿರೀಕ್ಷೆಗಿಂತ ಮಾನವೀಯತೆಯ ಭಾವನೆ ಮುಖ್ಯವಾಗಬೇಕು.

ಕೆ. ಶಾಂತಪ್ಪ ಅವರ ಬದುಕಿನ ಕುರಿತು ಅವರ ಸರಳ ಸ್ವಭಾವ, ಸೌಮ್ಯ ಮಾತು, ನಿರಹಂಕಾರದ ನಡೆ, ಪರೋಪಕಾರದ ಮನೋಭಾವ, ಅತಿಥಿಗಳನ್ನು ಆತ್ಮೀಯವಾಗಿ ಸತ್ಕರಿಸುವ ಗುಣ ಮತ್ತು ಪುಸ್ತಕದ ಪಯಣಕ್ಕೆ ನೀಡಿದ ಸಹಕಾರಇವೆಲ್ಲವೂ ಆ ಗೌರವಕ್ಕೆ ಅರ್ಥ ನೀಡುತ್ತವೆ. ಕಷ್ಟಗಳನ್ನು ಎದುರಿಸಿ ಮೇಲೆದ್ದು ನಿಲ್ಲುವುದು ಒಂದು ಸಾಧನೆ; ಆ ಸಾಧನೆಯ ನಂತರವೂ ಸರಳವಾಗಿ ಉಳಿಯುವುದು ಒಂದು ಸಂಸ್ಕಾರ. ಸ್ವತಃ ಬೆಳೆಯುವುದು ಒಂದು ಯಶಸ್ಸು; ಮತ್ತೊಬ್ಬರ ಬೆಳವಣಿಗೆಗೆ ನೆರವಾಗುವುದು ಒಂದು ಸಾರ್ಥಕತೆ. ಜನರಿಂದ ಗುರುತಿಸಿಕೊಳ್ಳುವುದು ಒಂದು ಹೆಜ್ಜೆ; ಜನರ ಮನಸ್ಸಿನಲ್ಲಿ ಗೌರವದ ಸ್ಥಾನ ಗಳಿಸುವುದು ಮತ್ತೊಂದು ಎತ್ತರ... ಎಂದು ಹೇಳುತ್ತಾ...

ಅವರ ಬದುಕು ಮತ್ತು ನಡೆ-ನುಡಿಗಳಲ್ಲಿ ಕಾಣುವ ಒಳ್ಳೆಯತನ ಮುಂದಿನ ದಿನಗಳಲ್ಲಿಯೂ ಅನೇಕ ಜನರಿಗೆ ಸ್ಫೂರ್ತಿಯಾಗಲಿ ಎಂಬುದು ನನ್ನ ಹಾರೈಕೆ. ಕೆ. ಶಾಂತಪ್ಪ ಅವರ ವ್ಯಕ್ತಿತ್ವಕ್ಕೆ ನನ್ನ ಅಕ್ಷರಗಳ ಮೂಲಕ ಒಂದು ಆತ್ಮೀಯ ನಮನ.

ಶ್ರೀಮತಿ ಆರ್. ಬಿ. ಪ್ರಿಯಾಂಕ
ರಾಯಚೂರು.



ತುಂಗ ಬಿಂಬ

# ವಿದ್ಯುತ್ ಅವಘಡಕ್ಕೆ ರೈತ ಬಲಿ: ಕುಟುಂಬಕ್ಕೆ ಬೋಸರಾಜು, ಹಂಪಯ್ಯ ನಾಯಕ ಸಾಂತ್ವನ



ಮಾನ್ವಿ: ತಾಲ್ಲೂಕಿನ ಕಾತರಕಿ ಗ್ರಾಮದಲ್ಲಿ ವಿದ್ಯುತ್ ಮೋಟಾರ್ ಚಾಲನೆ ಮಾಡಲು ತೆರಳಿದ್ದ ವೇಳೆ ವಿದ್ಯುತ್ ಕಂಬದ ಗೈ ವೈರ್‌ಗೆ ವಿದ್ಯುತ್ ಪ್ರವಹಿಸಿ ಮೃತಪಟ್ಟ ರೈತನ ಕುಟುಂಬಕ್ಕೆ ಮಾಜಿ ಸಚಿವ ಹಾಗೂ ವಿಧಾನ ಪರಿಷತ್ ಸದಸ್ಯ ಎನ್.ಎಸ್. ಬೋಸರಾಜು ಹಾಗೂ ಶಾಸಕ ಹಂಪಯ್ಯ ನಾಯಕ ಭೇಟಿ ನೀಡಿ ಸಾಂತ್ವನ ಹೇಳಿದರು.

ಮೃತ ರೈತನ ಮನೆಗೆ ಭೇಟಿ ನೀಡಿದ ನಾಯಕರು ಕುಟುಂಬದ ಸದಸ್ಯರಿಗೆ ಧೈರ್ಯ ತುಂಬಿ, ಘಟನೆ ಕುರಿತು ಮಾಹಿತಿ ಪಡೆದುಕೊಂಡರು. ಸರ್ಕಾರ ಹಾಗೂ ಸಂಬಂಧಿಸಿದ ಇಲಾಖೆಯಿಂದ ಮೃತರ ಕುಟುಂಬಕ್ಕೆ ದೊರೆಯಬೇಕಾದ ಪರಿಹಾರ ಮತ್ತು ಅಗತ್ಯ ನೆರವನ್ನು ಶೀಘ್ರ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಎನ್.ಎಸ್. ಬೋಸರಾಜು ಅವರು ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸಂಬಂಧಿಸಿದ ಕಾರ್ಯನಿರ್ವಾಹಕ ಅಭಿಯಂತರರೊಂದಿಗೆ ದೂರವಾಣಿ ಮೂಲಕ ಮಾತನಾಡಿ, ವಿದ್ಯುತ್ ಅವಘಡದಿಂದ ಮೃತಪಟ್ಟ ರೈತನ ಕುಟುಂಬಕ್ಕೆ ನಿಯಮಾನುಸಾರ ದೊರೆಯಬೇಕಾದ ಪರಿಹಾರವನ್ನು ವಿಳಂಬ ಮಾಡದೆ ಒದಗಿಸುವಂತೆ ಸೂಚಿಸಿದರು.

ಇದೇ ಸಂದರ್ಭದಲ್ಲಿ ತಾಲ್ಲೂಕಿನ ರೈತರಿಗೆ ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ತ್ರಿಫೇಸ್ ವಿದ್ಯುತ್‌ನ್ನು ಪ್ರತಿದಿನ ಏಳು ಗಂಟೆಗಳ ಕಾಲ ಸಮರ್ಪಕವಾಗಿ ಪೂರೈಸುವ ಅಗತ್ಯದ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಈ ಸಂದರ್ಭದಲ್ಲಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಅಬ್ದುಲ್ ಗಫೂರ್ ಸಾಬ್, ಕಾಂಗ್ರೆಸ್ ಮುಖಂಡರಾದ ಶರಣಯ್ಯ ನಾಯಕ, ಸುಭಾಷ್ ನಾಯಕ, ಬಾಲಸ್ವಾಮಿ ಕೊಡ್ಲಿ, ದೇವೇಂದ್ರಪ್ಪ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ನೆಲಕ್ಕುರುಳಿದ ಬಸರಿ ಮರಕ್ಕೆ ಮರುಜೀವ ನೀಡಿದ ಪರಿಸರ ಪ್ರೇಮಿಗಳು



ಸಿಂಧನೂರು: ಗಾಳಿ-ಮಳೆಗೆ ನೆಲಕ್ಕುರುಳಿದ್ದ ಬೃಹತ್ ಬಸರಿ ಮರವನ್ನು ಸ್ಥಳಾಂತರಿಸಿ ಮರುನಾಟಿ ಮಾಡುವ ಮೂಲಕ ಗೊರೇಬಾಳದ ಸಂಡೆ ಫಾರ್ ಸೋಷಿಯಲ್ ಸೇವಾ ಬಳಗ ಹಾಗೂ ವನಸಿರಿ ಫೌಂಡೇಷನ್ ರಾಯಚೂರು ಸದಸ್ಯರು ಪರಿಸರ ಕಾಳಜಿ ಮೆರೆದಿದ್ದಾರೆ.

ತಾಲೂಕಿನ ಗೊರೇಬಾಳ ಕ್ಯಾಂಪ್ ಸಮೀಪದ ಸಿಂಧನೂರುಗಂಗಾವತಿ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿದ್ದ ಬೃಹತ್ ಬಸರಿ ಮರ ಇತ್ತೀಚೆಗೆ ಸುರಿದ ಗಾಳಿ-ಮಳೆಗೆ ನೆಲಕ್ಕುರುಳಿತ್ತು. ಮರವನ್ನು ಹಾಗೆಯೇ ನಾಶವಾಗಲು ಬಿಡದೆ ಅದಕ್ಕೆ ಮರುಜೀವ ನೀಡಬೇಕು ಎಂಬ ಉದ್ದೇಶದಿಂದ ಸಂಡೆ ಫಾರ್ ಸೋಷಿಯಲ್ ಸೇವಾ ಬಳಗದ ಸದಸ್ಯರು ಮುಂದಾಗಿದ್ದಾರೆ.

ಮರವನ್ನು ಉಳಿಸಿದರೆ ಗ್ರಾಮಕ್ಕೆ ಶುದ್ಧ ಗಾಳಿ ನೀಡುವುದರ ಜೊತೆಗೆ ಪರಿಸರ ಸಂರಕ್ಷಣೆಗೆ ಕೊಡುಗೆ ನೀಡಬಹುದು ಎಂಬ ಆಶಯದಿಂದ ಬಳಗದ ಸದಸ್ಯರು ವನಸಿರಿ ಫೌಂಡೇಷನ್ ರಾಜ್ಯಾಧ್ಯಕ್ಷ ಅಮರೇಗೌಡ ಮಲ್ಲಾಪುರ ಅವರನ್ನು ಸಂಪರ್ಕಿಸಿ ಮಾಹಿತಿ ನೀಡಿದರು. ಇದಕ್ಕೆ ಸ್ಪಂದಿಸಿದ ಅವರು ಸ್ಥಳಕ್ಕೆ ಭೇಟಿ ನೀಡಿ ಮರವನ್ನು ಉಳಿಸುವ ಕಾರ್ಯಕ್ಕೆ ಕೈಜೋಡಿಸಿದರು.

ಸಂಡೆ ಫಾರ್ ಸೋಷಿಯಲ್ ಸೇವಾ ಬಳಗದ ಸದಸ್ಯರು, ಗ್ರಾಮದ ಹಿರಿಯರು ಹಾಗೂ ಯುವಕರ ಸಹಕಾರದೊಂದಿಗೆ ನೆಲಕ್ಕುರುಳಿದ್ದ ಮರವನ್ನು ಬುಡಸಮೇತ ತೆಗೆದು ಜೆಸಿಬಿ ಸಹಾಯದಿಂದ ಟ್ರ್ಯಾಕ್ಟರ್‌ಗೆ ಹೇರಲಾಯಿತು. ಬಳಿಕ ಅದನ್ನು ಗೊರೇಬಾಳ ಗ್ರಾಮದ ರುದ್ರಭೂಮಿಗೆ ಸ್ಥಳಾಂತರಿಸಿ ಮರುನಾಟಿ ಮಾಡಲಾಯಿತು. ಮರಕ್ಕೆ ನೀರುಣಿಸಿ ವಿಶೇಷ ಪೂಜೆಯನ್ನೂ ಸಲ್ಲಿಸಲಾಯಿತು.

ಸುಮಾರು ಐದು ಗಂಟೆಗಳ ಕಾಲ ನಡೆದ ಈ ಕಾರ್ಯ ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಬೃಹತ್ ಮರವನ್ನು ಕಡಿದು ನಾಶಪಡಿಸುವ ಬದಲು ಅದನ್ನು ಸಂರಕ್ಷಿಸಿ ಮರುನಾಟಿ ಮಾಡಿದ ಪರಿಸರ ಕಾಳಜಿಗೆ ಗೊರೇಬಾಳ ಹಾಗೂ ಸುತ್ತಮುತ್ತಲಿನ ಗ್ರಾಮಗಳ ರೈತರು, ಸಾರ್ವಜನಿಕರು ಮತ್ತು ಪರಿಸರ ಪ್ರೇಮಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಈ ಸಂದರ್ಭದಲ್ಲಿ ವನಸಿರಿ ಫೌಂಡೇಷನ್ ಮಸ್ಕಿ ತಾಲೂಕು ಅಧ್ಯಕ್ಷ ರಾಜು ಬಳಗಾನೂರು, ಗೊರೇಬಾಳ ಸಂಡೆ ಫಾರ್ ಸೋಷಿಯಲ್ ಸೇವಾ ಬಳಗದ ಸುಬ್ಬಣ್ಣನವರ ಚನ್ನಬಸವ, ಜಂಬಣ್ಣನವರ ಮಲ್ಲನಗೌಡ, ಎನ್. ಷಣ್ಮುಖಗೌಡ, ಆರ್. ಸಿದ್ದಲಿಂಗೇಶ್ವರ, ಎಂ. ಶರಣೇಗೌಡ, ಎಚ್. ಚನ್ನಬಸವ, ಎಂ. ಚನ್ನಬಸವ, ಎಸ್. ಸುಧಾಕರಗೌಡ, ಟಿ. ಚನ್ನಬಸವ, ಎಂ. ನಾಗೇಶ, ಎಚ್. ದೇವೇಂದ್ರಗೌಡ, ಎನ್. ವೀರೇಶಗೌಡ, ಎಲ್. ಹೇಮರೆಡ್ಡಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಅಂಬಾಭವಾನಿ 44ನೇ ವರ್ಷದ ಶರನ್ನವರಾತ್ರಿ ಮಹೋತ್ಸವಕ್ಕೆ ಸಜ್ಜು



ರಾಯಚೂರು, ಅ.4: ನಗರದ ಗೋಳಿ ಸಮಾಜದ ವತಿಯಿಂದ ಶ್ರೀ ಮಾತಾ ಅಂಬಾಭವಾನಿ ದೇವಿಯ 44ನೇ ವರ್ಷದ ಶರನ್ನವರಾತ್ರಿ ಅಂಗವಾಗಿ ಘಟಸ್ಥಾಪನೆ, ನವರಾತ್ರಿ ಮಹೋತ್ಸವ ಹಾಗೂ ಅಂಬಾಭವಾನಿ ರಜತ ಮೂರ್ತಿಯ ಪಲ್ಲಕ್ಕಿ ಸೇವೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಅ.11ರಿಂದ ಅ.26ರವರೆಗೆ ಹಮ್ಮಿಕೊಳ್ಳಲಾಗಿದೆ.

ಅ.11ರಿಂದ 20ರವರೆಗೆ ನವರಾತ್ರಿ ಮಹೋತ್ಸವ ನಡೆಯಲಿದ್ದು, ಅ.11ರಂದು ಭಾನುವಾರ ಬೆಳಗ್ಗೆ 10.30ಕ್ಕೆ ನಗರದ ಸೂಪರ್‌ಸ್ಪೆಷಾಲಿಟಿ 108 ಹಾಸಿಗೆಗಳ ಆಸ್ಪತ್ರೆ ಸಮೀಪದ ಶ್ರೀ ಸಾಯಿಬಾಬಾ ದೇವಸ್ಥಾನದಿಂದ ಪೂಜ್ಯರಾದ ಶ್ರೀ ಶಾಂತಮಲ್ಲಿ ಶಿವಾಚಾರ್ಯ ಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ವಾದ್ಯಮೇಳದೊಂದಿಗೆ ಸುಮಂಗಲಿಯರು ಕಳಶ ಹೊತ್ತು ಶ್ರೀ ಅಂಬಾಭವಾನಿ ಮೆರವಣಿಗೆ ನಡೆಸಲಿದ್ದಾರೆ.

ಮೆರವಣಿಗೆಯು ಭವಾನಿ ವೃತ್ತದ ಮೂಲಕ ಸಾಗಲಿದ್ದು, ದೇವಸ್ಥಾನದಲ್ಲಿ ಶ್ರೀ ಅಂಬಾಭವಾನಿ ಹಾಗೂ ಘಟಸ್ಥಾಪನೆ ಪ್ರತಿಷ್ಠಾಪಿಸಲಾಗುವುದು. ಸಂಜೆ 6ರಿಂದ 6.30ರವರೆಗೆ ಶುಭ ಮುಹೂರ್ತದಲ್ಲಿ ಭಕ್ತಿ ಸಂಭ್ರಮದೊಂದಿಗೆ ನವರಾತ್ರಿ ಕಾರ್ಯಕ್ರಮಗಳಿಗೆ ಚಾಲನೆ ದೊರೆಯಲಿದೆ.

ನವರಾತ್ರಿ ಅವಧಿಯಲ್ಲಿ ಪ್ರತಿದಿನ ಬೆಳಗ್ಗೆ 8ರಿಂದ ಮಧ್ಯಾಹ್ನ 12ರವರೆಗೆ ಹಾಗೂ ಸಂಜೆ 6ರಿಂದ ರಾತ್ರಿ 8ರವರೆಗೆ ಅಭಿಷೇಕ ಮತ್ತು ಅರ್ಚನೆ ಸೇರಿದಂತೆ ವಿವಿಧ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಮಂಗಳವಾರಗಳಂದು ವಿಶೇಷ ಅಲಂಕಾರ ಸೇವೆ ಹಾಗೂ ರಾತ್ರಿ 8ರಿಂದ 9ರವರೆಗೆ ನೂತನ ರಜತ ಮೂರ್ತಿಯ ಪಲ್ಲಕ್ಕಿ ಸೇವೆ ಜರುಗಲಿದೆ.

ಅ.19ರಂದು ಸೋಮವಾರ ದುರ್ಗಾಷ್ಟಮಿಯ ಅಂಗವಾಗಿ ಬೆಳಗ್ಗೆ 10.30ರಿಂದ ಮಧ್ಯಾಹ್ನ 2ರವರೆಗೆ ಹೋಮ-ಹವನ ಕಾರ್ಯಕ್ರಮ ಹಾಗೂ ಸಂಜೆ 7ರಿಂದ ದೀಪೋತ್ಸವ ಆಯೋಜಿಸಲಾಗಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾಗಬೇಕೆಂದು ಗೋಳಿ ಸಮಾಜದ ಪದಾಧಿಕಾರಿಗಳು ಕೋರಿದ್ದಾರೆ.

ಅ.26ರಂದು ಶರದ್ ಪೂರ್ಣಿಮೆಯ ಪ್ರಯುಕ್ತ ಬೆಳಗ್ಗೆ 8ರಿಂದ ಮಧ್ಯಾಹ್ನ 12ರವರೆಗೆ ಪೂಜೆ ಹಾಗೂ ಮಧ್ಯಾಹ್ನ 1ರಿಂದ ಸಂಜೆ 4ರವರೆಗೆ ಅನ್ನಸಂತರ್ಪಣೆ ನಡೆಯಲಿದೆ. ರಾತ್ರಿ 8ರಿಂದ ಶ್ರೀ ಮಾತಾ ಅಂಬಾಭವಾನಿ ದೇವಿಯ ರಜತ ಉತ್ಸವ ಮೂರ್ತಿಯ ಪಲ್ಲಕ್ಕಿ ಸೇವೆ ನಡೆಯುವ ಮೂಲಕ ವಿಶೇಷ ಧಾರ್ಮಿಕ ಕಾರ್ಯಕ್ರಮಗಳಿಗೆ ತೆರೆ ಬೀಳಲಿದೆ.

44ನೇ ವರ್ಷದ ಶರನ್ನವರಾತ್ರಿ ಮಹೋತ್ಸವದ ಅಧ್ಯಕ್ಷರಾಗಿ ಬಿ. ವಿಶ್ವನಾಥ, ಉಪಾಧ್ಯಕ್ಷರಾಗಿ ಕಟಕೋಳ ಎನ್. ಹಾಗೂ ಕಾರ್ಯದರ್ಶಿಯಾಗಿ ರಾಮು ಪಿ. ಕಾರ್ಯನಿರ್ವಹಿಸುತ್ತಿದ್ದು, ಗೋಳಿ ಸಮಾಜದ ಪದಾಧಿಕಾರಿಗಳು ಹಾಗೂ ಭಕ್ತರು ಕಾರ್ಯಕ್ರಮಗಳ ಸಿದ್ಧತೆಯಲ್ಲಿ ತೊಡಗಿದ್ದಾರೆ.

# ಕಕ್ಕಲದೊಡ್ಡಿ ಗ್ರಾಮವನ್ನು ಜಾಲಹಳ್ಳಿ ಹೋಬಳಿ, ಗ್ರಾಪಂ ವ್ಯಾಪ್ತಿಗೆ ಸೇರಿಸಲು ಒತ್ತಾಯ



ಜಾಲಹಳ್ಳಿ, ಅ.4: ದೇವದುರ್ಗ ತಾಲೂಕಿನ ಜಾಲಹಳ್ಳಿ ಸಮೀಪದ ಕಕ್ಕಲದೊಡ್ಡಿ ಗ್ರಾಮವನ್ನು ಜಾಲಹಳ್ಳಿ ಹೋಬಳಿ ಹಾಗೂ ಜಾಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರ್ಪಡೆಗೊಳಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಈ ಕುರಿತು ಶನಿವಾರ ಕಕ್ಕಲದೊಡ್ಡಿ ಗ್ರಾಮದಲ್ಲಿ ನಡೆದ ಗ್ರಾಮಸ್ಥರ ಸಭೆಯಲ್ಲಿ ಗ್ರಾಮದ ಹಿರಿಯರು, ಮುಖಂಡರು, ಯುವಕರು ಹಾಗೂ ಮಹಿಳೆಯರು ಭಾಗವಹಿಸಿ, ಗ್ರಾಮದ ಆಡಳಿತಾತ್ಮಕ ಅನುಕೂಲತೆಗಳ ಕುರಿತು ಚರ್ಚಿಸಿದರು.

ಕಕ್ಕಲದೊಡ್ಡಿ ಗ್ರಾಮವು ಜಾಲಹಳ್ಳಿಗೆ ಸಮೀಪದಲ್ಲಿರುವುದರಿಂದ ಆಡಳಿತಾತ್ಮಕ ಹಾಗೂ ಸಾರ್ವಜನಿಕ ಸೇವೆಗಳ ದೃಷ್ಟಿಯಿಂದ ಜಾಲಹಳ್ಳಿ ಹೋಬಳಿ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿಸುವುದು ಸೂಕ್ತವಾಗಿದೆ. ಪ್ರಸ್ತುತ ವಿವಿಧ ಸರ್ಕಾರಿ ಸೇವೆಗಳು ಹಾಗೂ ಕಚೇರಿ ಕೆಲಸಗಳಿಗಾಗಿ ಗ್ರಾಮಸ್ಥರು ದೂರದ ಸ್ಥಳಗಳಿಗೆ ತೆರಳಬೇಕಾದ ಅನಿವಾರ್ಯತೆ ಎದುರಿಸುತ್ತಿದ್ದಾರೆ. ಇದರಿಂದ ಸಮಯ ಮತ್ತು ಹಣ ವ್ಯಯವಾಗುವುದರ ಜೊತೆಗೆ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ ಎಂದು ಸಭೆಯಲ್ಲಿ ಗ್ರಾಮಸ್ಥರು ಅಭಿಪ್ರಾಯ ವ್ಯಕ್ತಪಡಿಸಿದರು.

ಜಾಲಹಳ್ಳಿ ಹೋಬಳಿ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಗ್ರಾಮವನ್ನು ಸೇರಿಸಿದರೆ ಕಂದಾಯ, ಪಂಚಾಯಿತಿ ಸೇರಿದಂತೆ ವಿವಿಧ ಸರ್ಕಾರಿ ಸೇವೆಗಳನ್ನು ಸುಲಭವಾಗಿ ಪಡೆಯಲು ಅನುಕೂಲವಾಗಲಿದೆ. ಅಲ್ಲದೆ, ಗ್ರಾಮದ ಅಭಿವೃದ್ಧಿ ಕಾರ್ಯಗಳ ಅನುಷ್ಠಾನಕ್ಕೂ ಸಹಕಾರಿಯಾಗಲಿದೆ ಎಂದು ಗ್ರಾಮಸ್ಥರು ತಿಳಿಸಿದರು.

ಈ ಹಿನ್ನೆಲೆಯಲ್ಲಿ ಕಕ್ಕಲದೊಡ್ಡಿ ಗ್ರಾಮವನ್ನು ಜಾಲಹಳ್ಳಿ ಹೋಬಳಿ ಹಾಗೂ ಜಾಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರ್ಪಡೆಗೊಳಿಸುವಂತೆ ಸಂಬಂಧಪಟ್ಟ ಇಲಾಖೆ ಮತ್ತು ಅಧಿಕಾರಿಗಳಿಗೆ ಮನವಿ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಯಿತು.

ಗ್ರಾಮಸ್ಥರ ಬಹುದಿನಗಳ ಬೇಡಿಕೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಅಗತ್ಯ ಆಡಳಿತಾತ್ಮಕ ಪ್ರಕ್ರಿಯೆ ಕೈಗೊಂಡು ಶೀಘ್ರವೇ ಜಾಲಹಳ್ಳಿ ವ್ಯಾಪ್ತಿಗೆ ಸೇರ್ಪಡೆಗೊಳಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದರು.

ಸಭೆಯಲ್ಲಿ ಯಲ್ಲನಗೌಡ ಬೆನಕನ, ಮಲ್ಲಿಕಾರ್ಜುನ ಬೆನಕನ, ಶಿವನಗೌಡ ಪೊಲೀಸ್ ಪಾಟೀಲ್, ಶರಣಗೌಡ ಬೆನಕನ, ಯಂಕಣ್ಣ ಸೌವರ್ಕ, ಭೀಮನಗೌಡ ಮಾಲಿ ಪಾಟೀಲ್, ಯಾಕಣ್ಣ ಮಾಡಬಾಳ್, ಶಿವನಗೌಡ ದೇಸಾಯಿ, ಶರಣಪ್ಪ ದೇಸಾಯಿ, ಚನ್ನಬಸವ ಮಾಲಿ ಪಾಟೀಲ್, ಶಿವನಗೌಡ ಮಲ್ಕಾಪುರ, ಸುಭಾಷ್ ಬೇವಿನಗಿಡ, ಅಂಬ್ರೆಯ್ಯ ಸ್ವಾಮಿ, ಮಲ್ಲಿಕಾರ್ಜುನ ಮಲ್ಕಾಪುರ, ವೆಂಕಟರೆಡ್ಡಿ ಬೆನಕನ, ಗುರುನಾಥ ಕಮತಿಗಿ, ಅಯ್ಯನಗೌಡ ಮಾಲಿ ಪಾಟೀಲ್, ಮಲ್ಲಣ್ಣ ಮಲ್ಕಾಪುರ, ಮಲ್ಲಣ್ಣ ಸಂಗಪುರ, ನಿಂಗಣ್ಣ ಕರಕಿಳ್ಳಿ, ಮುದ್ದಕಣ್ಣ ಮಲ್ಕಾಪುರ, ಶರಣಪ್ಪ ಬಾಳಗನ್ನೂರ, ಬಸವರಾಜ ಬಸರೆಡ್ಡಿ, ಶಿವರೆಡ್ಡಿ ಗಣೇಕಲ್, ಸಿದ್ದುಣ್ಣ ಕರ್ಬೀ, ರಾಜೇಶ್ ಸಾಬ್, ಸಣ್ಣಲಾಲ್ ಸಾಬ್, ಮಮ್ಮಾ ಸಾಬ್, ಖಾಜಾ ಸಾಬ್, ಸಾಬಣ್ಣ ಜಮಾಲ್ದಿನಿ, ಹನುಮಂತರಾಯ ಅಸರತಿ, ಜಾನಪ್ಪ ಜಮಾಲ್ದಿನಿ, ಹನುಮಂತ ಅಸರತಿ, ನಿಂಗಣ್ಣ ಅಸರತಿ, ಗೋಯಪ್ಪ ವಟಗಲ್, ತಿರುಪತಿ ವಟಗಲ್, ರಂಗಪ್ಪ, ಶಿವುಪ್ಪ, ರಾಮಪ್ಪ, ಹಲಗಪ್ಪ, ನಾಗಪ್ಪ ಸೇರಿದಂತೆ ಗ್ರಾಮದ ಪ್ರಮುಖರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ದೇವದುರ್ಗ, ಅರಕೇರಾ ತಾಲೂಕು ದಸಂಸ ಸಮಿತಿಗಳಿಗೆ ನೂತನ ಪದಾಧಿಕಾರಿಗಳ ಆಯ್ಕೆ




ದೇವದುರ್ಗ: ಕರ್ನಾಟಕ ದಲಿತ ಸಂಘರ್ಷ ಸಮಿತಿ (ಮಹಾತ್ಮ ಪ್ರೊ. ಬಿ. ಕೃಷ್ಣಪ್ಪ ನೇತೃತ್ವದ ಸಂಘಟನೆ) ರಿ.386/2020-21ರ ರಾಯಚೂರು ಜಿಲ್ಲಾ ಸಮಿತಿ ವತಿಯಿಂದ ದೇವದುರ್ಗ ಹಾಗೂ ಅರಕೇರಾ ತಾಲೂಕು ಸಮಿತಿಗಳನ್ನು ರಚಿಸಿ, ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ರಾಜ್ಯ ಸಂಘಟನಾ ಸಂಚಾಲಕ ಶಿವಪ್ಪ ಪಲಕನಮರಡಿ ಅವರ ನೇತೃತ್ವದಲ್ಲಿ, ತುರುಮಂದೆಪ್ಪ ಕಟ್ಟಿಮನಿ ಹಾಗೂ ಕಾಶಿಮಪ್ಪ ಮುರಾರಿ ಅವರ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ ಉಭಯ ತಾಲೂಕುಗಳ ಸಂಘಟನೆಯನ್ನು ಬಲಪಡಿಸುವ ಉದ್ದೇಶದಿಂದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ದೇವದುರ್ಗ ತಾಲೂಕು ಸಂಚಾಲಕರಾಗಿ ರಮೇಶ್ ಭಾವಿಮನಿ ಆಯ್ಕೆಯಾದರು. ಸಂಘಟನಾ ಸಂಚಾಲಕರಾಗಿ ರಾಮು ಮಾದರಕಲ್, ಡೇವಿಡ್ ಮಸರಕಲ್, ಚನ್ನಬಸವ ಕೊಪ್ಪರ, ಸಿದ್ದಪ್ಪ ಬೂದಿನಾಳ, ಜಯಂ ಮಸರಕಲ್, ಸಂಗಮೇಶ ಲಿಂಗದಹಳ್ಳಿ, ಮಹೇಶ್ ಹಿರೇಬುದೂರು ಹಾಗೂ ಮೌನೇಶ್ ಗಾಂಜಿ ಅವರನ್ನು ನೇಮಕ ಮಾಡಲಾಯಿತು. ಖಜಾಂಚಿಯಾಗಿ ರಮೇಶ್ ಹೆದ್ದೆರಿ ಆಯ್ಕೆಯಾದರು.

ಅರಕೇರಾ ತಾಲೂಕು ಸಂಚಾಲಕರಾಗಿ ರಾಮಪ್ಪ ಮೇಸ್ತ್ರಿ ಮುಷ್ಟೂರ್ ಅವರನ್ನು ಆಯ್ಕೆ ಮಾಡಲಾಯಿತು. ಸಂಘಟನಾ ಸಂಚಾಲಕರಾಗಿ ಶಿವಪ್ಪ ಜೆರಬಂಡಿ, ಈಶಪ್ಪ ಶಿವಂಗಿ, ಮೌನೇಶ್ ಕರಡೋಣ, ಆದೇಪ್ಪ ಮ್ಯಾಕಲದೊಡ್ಡಿ, ಸಿದ್ದಪ್ಪ ಜಿಂಕಲ್ ಪಲಕನಮರಡಿ, ನಿಂಗಪ್ಪ ತಿಪ್ಪಲದಿನ್ನಿ ಹಾಗೂ ರಮೇಶ್ ಭೋವಿ ಗೆಜ್ಜೆಬಾವಿ ಅವರನ್ನು ನೇಮಕ ಮಾಡಲಾಯಿತು. ಖಜಾಂಚಿಯಾಗಿ ವೀರೇಶ್ ಭೇರಿ ಆಯ್ಕೆಯಾದರು.

ದಲಿತ ಮಹಿಳಾ ಒಕ್ಕೂಟದ ಸಂಚಾಲಕರಾಗಿ ಚನ್ನಮ್ಮ ಹಾಗೂ ಅರಕೇರಾ ಅಲ್ಪಸಂಖ್ಯಾತ ಸಂಚಾಲಕರಾಗಿ ಗಫೂರ್ ದೇವದುರ್ಗ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ರಾಜ್ಯ ಸಂಘಟನಾ ಸಂಚಾಲಕ ಶಿವಪ್ಪ ಪಲಕನಮರಡಿ, ಪ್ರೊ. ಬಿ. ಕೃಷ್ಣಪ್ಪ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ತತ್ವ ಮತ್ತು ಸಿದ್ಧಾಂತಗಳ ಆಧಾರದಲ್ಲಿ ಸಂಘಟನೆಯನ್ನು ಮತ್ತಷ್ಟು ಬಲಪಡಿಸಬೇಕು. ಸಾಮಾಜಿಕ ನ್ಯಾಯಕ್ಕಾಗಿ ನಿರಂತರ ಹೋರಾಟ ನಡೆಸುವ ಮೂಲಕ ಎಲ್ಲ ಜಾತಿ-ಸಮುದಾಯಗಳ ಬಡವರಿಗೆ ದೇಶದ ಸಂಪನ್ಮೂಲಗಳು ಸಮಾನವಾಗಿ ಹಂಚಿಕೆಯಾಗುವಂತೆ ಧ್ವನಿ ಎತ್ತಬೇಕು ಎಂದರು.

ಬಡವರು ಹಾಗೂ ಶೋಷಿತರಿಗೆ ವಸತಿ, ನಿವೇಶನ ಮತ್ತು ಅಗತ್ಯ ಮೂಲಸೌಕರ್ಯಗಳು ದೊರೆಯುವಂತೆ ಸಂಘಟನೆ ಹೋರಾಟ ನಡೆಸಬೇಕು. ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಚಳವಳಿಯನ್ನು ಸದಾ ಜೀವಂತವಾಗಿಡಬೇಕು ಎಂದು ನೂತನ ಪದಾಧಿಕಾರಿಗಳಿಗೆ ಕರೆ ನೀಡಿದರು.

ಸಭೆಯಲ್ಲಿ ದಲಿತ ಕವಿ ಪ್ರಶಾಂತ ದಾನಪ್ಪ, ರಡ್ಡೆಪ್ಪ ಮಸ್ಕಿ, ಸಂಚಾಲಕರಾದ ಸಾಬಣ್ಣ ಕಮಲದಿನ್ನಿ, ಬಾಳಪ್ಪ ಬಾವಿಮನಿ, ಚನ್ನಬಸವ ನಾಯಕ ಮ್ಯಾಕಲದೊಡ್ಡಿ, ರಮೇಶ ಬಾಗೂರು, ಯಲ್ಲಪ್ಪ ಆಲ್ದರ್ತಿ, ರಮೇಶ ಜಾಡಲದಿನ್ನಿ, ಕಾಜಹುಸೇನ ಪಲಕನಮರಡಿ ಸೇರಿದಂತೆ ಸಂಘಟನೆಯ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಸಂಪರ್ಕಿಸಿ
ನಿಮ್ಮ ವಿಶ್ವಾಸ ಅರ್ಹ ಪತ್ರಿಕೆಯ
ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
98863 85685
tungabimba@gmail.com

# ಪರಿಸರ ಸಂರಕ್ಷಣೆಯ ರಾಯಭಾರಿಗಳಾಗಿ ಕಾರ್ಯನಿರ್ವಹಿಸಿ: ಡಾ. ಮಂಜುನಾಥ ಪಾಟೀಲ




ರಾಯಚೂರು: ಪರಿಸರ ಸಂರಕ್ಷಣೆ ಕೇವಲ ಒಂದು ದಿನದ ಕಾರ್ಯಕ್ರಮಕ್ಕೆ ಸೀಮಿತವಾಗದೆ ಪ್ರತಿಯೊಬ್ಬರ ಜೀವನದ ಅವಿಭಾಜ್ಯ ಅಂಗವಾಗಬೇಕು. ಪ್ರಶಿಕ್ಷಣಾರ್ಥಿಗಳು ಪರಿಸರ ಸಂರಕ್ಷಣೆಯ ರಾಯಭಾರಿಗಳಾಗಿ ಕಾರ್ಯನಿರ್ವಹಿಸಬೇಕು ಎಂದು ಹೇರೂರು ಚಂದ್ರಾಯಗೌಡ ಮಲ್ಹಾರ ಸಿದ್ದಪ್ಪಗೌಡ ಕರೆಡ್ಡಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಮಂಜುನಾಥ ಪಾಟೀಲ ವಟಗಲ್ ಕರೆ ನೀಡಿದರು.

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು ಹಾಗೂ ಜಿಲ್ಲಾ ವೀರಶೈವ ಲಿಂಗಾಯತ ಸಮಾಜದ ಹೇರೂರು ಚಂದ್ರಾಯಗೌಡ ಮಲ್ಹಾರ ಸಿದ್ದಪ್ಪಗೌಡ ಕರೆಡ್ಡಿ ಶಿಕ್ಷಣ ಮಹಾವಿದ್ಯಾಲಯ ಮತ್ತು ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕದ ವತಿಯಿಂದ ದೇವದುರ್ಗ ತಾಲ್ಲೂಕಿನ ಗಬ್ಬೂರಿನ ಎಸ್‌ಎಲ್‌ಡಿ ಪಬ್ಲಿಕ್ ಶಾಲೆಯಲ್ಲಿ ಹಮ್ಮಿಕೊಂಡಿರುವ ವಾರ್ಷಿಕ ವಿಶೇಷ ಶಿಬಿರದ ಎರಡನೇ ದಿನ ಪರಿಸರ ಸಂರಕ್ಷಣೆಯಲ್ಲಿ ಪ್ರಶಿಕ್ಷಣಾರ್ಥಿಗಳ ಪಾತ್ರ ವಿಷಯದ ಕುರಿತು ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

“ಪ್ರಕೃತಿ ನಮ್ಮ ಅಗತ್ಯಗಳನ್ನು ಪೂರೈಸಬಲ್ಲದೇ ಹೊರತು ದುರಾಶೆಯನ್ನಲ್ಲ ಎಂಬ ಮಹಾತ್ಮ ಗಾಂಧೀಜಿಯವರ ಸಂದೇಶವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳಬೇಕು. ನಾವು ಪ್ರಕೃತಿಯನ್ನು ರಕ್ಷಿಸಿದರೆ ಪ್ರಕೃತಿ ನಮ್ಮನ್ನು ರಕ್ಷಿಸುತ್ತದೆ. ಪ್ರಶಿಕ್ಷಣಾರ್ಥಿಗಳು ಇಂದಿನಿಂದಲೇ ಪರಿಸರ ಸಂರಕ್ಷಣೆಯ ಜವಾಬ್ದಾರಿ ಹೊತ್ತು ಸಮಾಜದಲ್ಲಿ ಜಾಗೃತಿ ಮೂಡಿಸಬೇಕು’’ ಎಂದರು.

ಮುಖ್ಯ ಉಪನ್ಯಾಸಕರಾಗಿ ಭಾಗವಹಿಸಿದ್ದ ಗ್ರೀನ್ ರಾಯಚೂರು ಕಾರ್ಯದರ್ಶಿ ರಾಜೇಂದ್ರ ಶಿವಾಳಿ ಮಾತನಾಡಿ, ಜಾಗತಿಕ ತಾಪಮಾನ ಏರಿಕೆ ಮತ್ತು ಮಾಲಿನ್ಯದಿಂದ ಪರಿಸರದ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತಿದೆ. ಪ್ರಶಿಕ್ಷಣಾರ್ಥಿಗಳು ಪಠ್ಯ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗದೆ ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವುದು, ನೀರನ್ನು ಮಿತವಾಗಿ ಬಳಸುವುದು, ಸಸಿಗಳನ್ನು ನೆಟ್ಟು ಪೋಷಿಸುವುದು ಸೇರಿದಂತೆ ಪರಿಸರ ಸ್ನೇಹಿ ಚಟುವಟಿಕೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಯುವಶಕ್ತಿ ಮತ್ತು ಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಂಡರೆ ಸಮಾಜದಲ್ಲಿ ಮಹತ್ವದ ಬದಲಾವಣೆ ತರಲು ಸಾಧ್ಯ ಎಂದರು.

ಉಪನ್ಯಾಸಕ ಉತ್ತಪ್ಪ ಕೆ. ಮಾತನಾಡಿ, ತರಗತಿಯಿಂದ ಹೊರಡುವಾಗ ಅನಗತ್ಯವಾಗಿ ಉರಿಯುತ್ತಿರುವ ವಿದ್ಯುತ್ ದೀಪ ಹಾಗೂ ಫ್ಯಾನ್‌ಗಳನ್ನು ಆಫ್ ಮಾಡುವುದು, ನೀರನ್ನು ಪೋಲು ಮಾಡದಿರುವಂತಹ ಸಣ್ಣ ಅಭ್ಯಾಸಗಳಿಂದಲೂ ಪರಿಸರ ಸಂರಕ್ಷಣೆಗೆ ಮಹತ್ವದ ಕೊಡುಗೆ ನೀಡಬಹುದು ಎಂದು ತಿಳಿಸಿದರು.

ಹಿರಿಯ ಉಪನ್ಯಾಸಕಿ ಶರಣಮ್ಮ ಮಾತನಾಡಿ, ವರ್ಷಕ್ಕೊಮ್ಮೆ ಸಸಿ ನೆಟ್ಟು ಫೋಟೊ ತೆಗೆಸಿಕೊಳ್ಳುವುದಕ್ಕಷ್ಟೇ ಪರಿಸರ ಕಾಳಜಿ ಸೀಮಿತವಾಗಬಾರದು. ನೆಟ್ಟ ಸಸಿಯನ್ನು ದತ್ತು ಪಡೆದು ಅದು ಮರವಾಗಿ ಬೆಳೆಯುವವರೆಗೆ ನೀರುಣಿಸಿ ಪೋಷಿಸುವ ಜವಾಬ್ದಾರಿಯನ್ನೂ ತೆಗೆದುಕೊಳ್ಳಬೇಕು ಎಂದರು.

ಉಪನ್ಯಾಸಕಿ ಮಾಧುರಿ ಮಾತನಾಡಿ, ಪರಿಸರ ಸಂರಕ್ಷಣೆ ನಮ್ಮ ಭವಿಷ್ಯದ ಅಸ್ತಿತ್ವಕ್ಕೆ ಸಂಬಂಧಿಸಿದ ವಿಷಯವಾಗಿದೆ. ಪರಿಸರ ಉಳಿಸುವ ಹೊಣೆಗಾರಿಕೆ ಪ್ರತಿಯೊಬ್ಬರ ಮೇಲಿದ್ದು, ಜವಾಬ್ದಾರಿಯನ್ನು ಅರಿತು ಕಾರ್ಯಪ್ರವೃತ್ತರಾಗಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಿಬಿರದ ಸಂಯೋಜನಾಧಿಕಾರಿ ಡಾ. ಸಿದ್ದರಾಮಯ್ಯ ಹಿರೇಮಠ, ದೈಹಿಕ ಶಿಕ್ಷಣ ನಿರ್ದೇಶಕ ಹಾಗೂ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಶಶಿಕುಮಾರ, ಉಪನ್ಯಾಸಕರಾದ ವೀರನಗೌಡ, ಹೇಮರೆಡ್ಡಿ ಪಾಟೀಲ, ಹಂಪಮ್ಮ, ಪ್ರವೀಣ ಕುಮಾರ, ಈರಪ್ಪ ಸರ್ಜಾಪುರ ಹಾಗೂ ಎನ್‌ಎಸ್‌ಎಸ್ ಶಿಬಿರದ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

# ನೂತನ ವ್ಯವಸ್ಥಾಪಕ ನಿರ್ದೇಶಕ ಶಶಿಧರ್ ಕುರೇರಾಗೆ ಎಐಟಿಯುಸಿ ಸನ್ಮಾನ



ಹಟ್ಟಿ ಚಿನ್ನದ ಗಣಿ: ಹಟ್ಟಿ ಚಿನ್ನದ ಗಣಿ ಕಂಪನಿಯ ನೂತನ ವ್ಯವಸ್ಥಾಪಕ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡ ಶಶಿಧರ್ ಕುರೇರಾ (ಭಾ.ಆ.ಸೇ.) ಅವರನ್ನು ಎಐಟಿಯುಸಿ ಸಂಘಟನೆಯ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಕಂಪನಿಯ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಐಟಿಯುಸಿ ಪದಾಧಿಕಾರಿಗಳು ಹಾಗೂ ಕಾರ್ಮಿಕ ಪ್ರತಿನಿಧಿಗಳು ಶಶಿಧರ್ ಕುರೇರಾ ಅವರಿಗೆ ಶಾಲು ಹೊದಿಸಿ ಸನ್ಮಾನಿಸಿ, ನೂತನ ಜವಾಬ್ದಾರಿಗೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಎಐಟಿಯುಸಿ ಹಟ್ಟಿ ಘಟಕದ ಅಧ್ಯಕ್ಷ ನರಸಪ್ಪ ಬಾದರೆದಿನ್ನಿ, ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ತಿಪ್ಪಣ್ಣ ಮಾಚನೂರು, ನಾಗರಡ್ಡಿ ಜೆರಬಂಡಿ, ಜಿ.ಎಸ್. ಹನುಮಂತ ಸುಣ್ಣದಕಲ್ಲು, ಗಂಗಪ್ಪ ಶಾಕೋದಿ, ಪೆಂಚಲಮ್ಮ, ಮುನಿರುದ್ದೀನ್, ಕನಕರಾಜ್ ಗೌಡ ಗುರಿಕಾರ, ಅಬ್ರಾಮ್, ಅಮೀರ್ ಪಾಷಾ, ಸಲೀಂ ಪಾಷಾ, ನಾಗರಾಜ, ರಂಗನಾಥ, ಮೌನುದ್ದೀನ್ ಬೂದಿಹಾಳ, ಚನ್ನಬಸವ, ಖಾಜಾ ಮಾದರ್ಕಲ್ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

Printed By and Published By Tunga Bimba Printers & Publishers 4-4-401/94, Gulbraga Builders Layout, Opp Navodaya Hospital, Yeragera Road, Raichur-584103. Editor: Gururaja.K